ಸಂಪುಟ : 10 ಸಂಚಿಕೆ: 27 ಪುಟ : 4+2 ಬೆಲೆ: 3.00 ಮಂಗಳವಾರ ಫೆಬ್ರವರಿ 25 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 27 Pages : 4+2 Price : 3.00 Tuesday February 25 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಫೆ. 25ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

**ಸ್ಥಳಗಳ ವಿವರ:** ವಾರ್ಡ್ ನಂ. 29 ಚಂದಾವರಿ ಸರ್ ಲೈನ್, ಡಂಬಳದವರ ಲೈನ್, ಗುಂಪಿನ ಮನೆ, ಬಾಂಡಗೆಯವರ ಲೈನ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 27 – ಕಾಶಿ ವಿಶ್ವನಾಥ್ ನಗರ, ಹನುಮಂತ ದೇವರ ಗುಡಿ, ಅಸೂಟಿಯವರ ಲೈನ್, ಕಣವಿಯವರ ಲೈನ್, ದುರಗಮ್ಮನ ಗುಡಿ, ವಿ ಆರ್ ಎಲ್ ಆಫೀಸ್, ಮಾಳಕೋಟೇಶ್ವರ ಗುಡಿ ಉಳಿದ ಕೆಲವು ಭಾಗಗಳು. ವಾರ್ಡ್ ನಂ.22 – ಗಂಗಿಮಡಿ, ಲಿಡ್ಕರ್ ಬಡಾವಣೆ, ಅಪಾರ್ಟ್ಮೆಂಟ್ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 6, 5 – ಹನುಮಂತ ದೇವರ ಗುಡಿ, ಬಾಳಿಕಾಯಿಯವರ ಲೈನ್, ಹೊನ್ನಪ್ಪರವರ ಲೈನ್, ಪಾಟೀಲರ ಲೈನ್, ರೇಣುಕಾಚಾರ್ಯ ಮಠ, ಶಿವನಾಗನಗರ 4 ಭಾಗಗಳು, ಗಣೇಶನಗರ 4 ಭಾಗಗಳು ಉಳಿದ ಕೆಲವು ಭಾಗಗಳು. ವಾರ್ಡ್ ನಂ. 16 – ಡಿಸಿ ಮಿಲ್ ರಸ್ತೆ. ವಾರ್ಡ್ ನಂ. 33 – ಜಾಕಿರ ಹುಸೇನ್ ಕಾಲೋನಿ, ಬ್ಯಾಂಕರ್ಸ್ ಕಾಲೋನಿ, ಕೇಶವ ನಗರ, ವೀರೇಶ್ವರ ನಗರ, ಬ್ಯಾಂಕ್ ಸುತ್ತಮುತ್ತಲಿನ ಲೈನ್‌ಗಳು, ಮುಳಗುಂದ ರಸ್ತೆ ಉಳಿದ ಕೆಲವು ಭಾಗಗಳು.

**ಪ್ರಕಟಣೆ:** ಗದಗ–ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ತುಂಗಭದ್ರಾ ನದಿಯಿಂದ ಸರಬರಾಜು ಆಗುತ್ತಿರುವ ನೀರನ್ನು ಕಾಯಿಸಿ ಆರಿಸಿ ಕುಡಿಯಲು ನಿರ್ದೇಶನ ನೀಡಲಾಗಿದೆ ಹಾಗೂ ತಮಗೆ ನೀರು ಸಾಕಾದಾಗ ತಮ್ಮ ತಮ್ಮ ನೀರಿನ ನಳಗಳನ್ನು ಬಂದ್ ಮಾಡುವ ಮೂಲಕ ನೀರು ಪೋಲಾಗದಂತೆ ತಡೆಯುವಲ್ಲಿ ಮುತುವರ್ಜಿ ವಹಿಸಬೇಕೆಂದು ಹಾಗೂ ತಮ್ಮ ನೀರಿನ ಕರ ಪಾವತಿಸುವಲ್ಲಿ ತಾವು ವಿಳಂಬ ಮಾಡದೇ ತಮ್ಮ ಬಾಕಿ ಇರುವ ನೀರಿನ ಕರವನ್ನು ನಗರಸಭೆಗೆ ಪಾವತಿಸಬೇಕೆಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.. ಒಂದು ವೇಳೆ ಈ ರೀತಿ ಮಾಡದೇ ಹೋದ ಸಂದರ್ಭದಲ್ಲಿ ತಮಗೆ ದಂಡ ವಿಧಿಸಿ ತಮ್ಮ ನೀರಿನ ನಳವನ್ನು ಬಂದ್ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರ್ವಜನಿಕ ಅಹವಾಲು ಸಭೆ ಫೆ.27ಕ್ಕೆ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಆರ್ಥಿಕ ವರ್ಷ 2025–26ರಿಂದ ಆರ್ಥಿಕ ವರ್ಷ 2027–28ರ ಅವಧಿಯ ವಿದ್ಯುತ್ ದರ ಪರಿಷ್ಕರಣಾ ಅರ್ಜಿಯ ಸಂಬಂಧ ಪಿ.ಬಿ. ರಸ್ತೆ, ನವನಗರ, ಹುಬ್ಬಳ್ಳಿಯಲ್ಲಿರುವ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ನಿಗಮ ಕಛೇರಿ, ನೂತನ ಸಭಾಂಗಣ ಕೊಠಡಿಯಲ್ಲಿ ಸಾರ್ವಜನಿಕ ವಿಚಾರಣೆ ಫೆ.27ರ ಬೆಳಿಗ್ಗೆ 10.30 ಗಂಟೆಗೆ ಜರುಗಲಿದ್ದು, ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳನ್ನು ಮೌಖಿಕ/ಲಿಖಿತ ರೂಪದಲ್ಲಿ ಸಲ್ಲಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

### ಜಿಲ್ಲಾ ಮಟ್ಟದ ಉದ್ಯೋಗ ಮೇಳದ ಪೂರ್ವಭಾವಿ ಸಭೆಯಲ್ಲಿ ಕಾರ್ಮಿಕ ಸಚಿವ ಸಂತೋಷ ಲಾಡ್ ಸೂಚನೆ

# ವ್ಯವಸ್ಥಿತವಾಗಿ ಉದ್ಯೋಗ ಮೇಳ ಸಂಘಟಿಸಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಸರಕಾರದಿಂದ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಆಯೋಜಿಸುತ್ತಿರುವುದರಿಂದ ಅಧಿಕಾರಿಗಳು ಉದ್ಯೋಗದಾತರಿಗೆ ಮತ್ತು ಉದ್ಯೋಗ ಆಕಾಂಕ್ಷಿಗಳಿಗೆ ಅನುಕೂಲವಾಗುವಂತೆ ವ್ಯವಸ್ಥಿತವಾಗಿ ಉದ್ಯೋಗ ಮೇಳ ಸಂಘಟಿಸಬೇಕೆಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸೂಚಿಸಿದರು.

ಅವರು ಸೋಮವಾರ ಮಧ್ಯಾಹ್ನ ಜಿ.ಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಆಯೋಜನೆ ಕುರಿತು ವಿವಿಧ ಇಲಾಖೆ ಅಧಿಕಾರಿಗಳ ಮತ್ತು ಅವಳಿ ನಗರದ ಕೈಗಾರಿಕೋದ್ಯಮಿಗಳೊಂದಿಗೆ ಪೂರ್ವಭಾವಿ ಸಭೆ ಜರುಗಿಸಿ ಮಾತನಾಡಿದರು.

ಅರ್ಹತೆ ಇರುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ದೊರೆಯಬೇಕು. ಉದ್ಯೋಗ ಆಕಾಂಕ್ಷಿಗಳಿಗೆ ಅನುಕೂಲವಾಗಲು ಸರ್ಕಾರದಿಂದಲೇ ಉದ್ಯೋಗ ಮೇಳ ಆಯೋಜಿಸಿ, ಖಾಸಗಿ ಕೈಗಾರಿಕೆಗಳಲ್ಲಿ ಉದ್ಯೋಗ ಕಲ್ಪಿಸಲು ಈ ಉದ್ಯೋಗ ಮೇಳ ಸಂಘಟಿಸಲಾಗುತ್ತಿದೆ ಎಂದರು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಮಾತನಾಡಿ, ಉದ್ಯೋಗ ಮೇಳದಲ್ಲಿ ಭಾಗವಹಿಸುವ ಕೈಗಾರಿಕೆಗಳು ತಮ್ಮ ತಮ್ಮ ಉದ್ಯೋಗ ಬೇಡಿಕೆ, ನೀಡುವ ವೇತನ, ಅರ್ಹತೆಗಳು ಮತ್ತು ಬೇಡಿಕೆ ಸಂಖ್ಯೆಯನ್ನು ಸಲ್ಲಿಸಬೇಕು. ಈ ಎಲ್ಲ ಮಾಹಿತಿಯನ್ನು ದಾಖಲಿಸಿ ಉದ್ಯೋಗ ಮೇಳ ವೆಬ್‌ಸೈಟ್ ಹಾಗೂ ಕೌಶಲ್ಯ ಕರ್ನಾಟಕ ವೆಬ್‌ಸೈಟ್‌ಗೆ ಜೋಡಿಸಬೇಕು. ಉದ್ಯೋಗ ಆಕಾಂಕ್ಷಿಗಳು ಈ ಲಿಂಕ್ ನೋಡಿ, ತಮ್ಮ ಉದ್ಯೋಗ ಸ್ಥಳ ಮತ್ತು ಕೈಗಾರಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದರು.




ಉದ್ಯೋಗ ಮೇಳವನ್ನು ವ್ಯವಸ್ಥಿತವಾಗಿ ಸಂಘಟಿಸಬೇಕು. ಮೇಳ ಪೂರ್ವದ ಒಂದು ವಾರ ಮೊದಲೇ ಉದ್ಯೋಗಾಂಕ್ಷಿಗಳ ಮಾಹಿತಿ, ಬೇಡಿಕೆ ಸಂಗ್ರಹಿಸಿ, ಮ್ಯಾಪಿಂಗ್ ಮಾಡಬೇಕು. ಅವಳಿ ನಗರದ ಕೈಗಾರಿಕೋದ್ಯಮಿಗಳಿಂದ ಕಾರ್ಮಿಕರ ಬೇಡಿಕೆ ಪಡೆಯಬೇಕು. ಅದಕ್ಕೆ ಅನುಗುಣವಾಗಿ ಕಾರ್ಯಕ್ರಮ ರೂಪಿಸಬೇಕೆಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರವು, ಖಾಸಗಿ ವಲಯದ ಉದ್ಯೋಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಮಾಲೀಕರನ್ನು, ಉದ್ಯೋಗದಾತರನ್ನು ಉತ್ತೇಜಿಸುವ ದೃಷ್ಟಿಯಿಂದ ಹಾಗೂ ಈ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಖಾಸಗಿ ವಲಯದಲ್ಲಿ ಉದ್ಯೋಗಾವಕಾಶ ಪಡೆಯಲು ಅನುಕೂಲವಾಗುವಂತೆ ಆಶಾದೀಪ ಎಂಬ ನೂತನ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯ ಮೂಲಕ ಜಾರಿಗೊಳಿಸಲಾಗುತ್ತಿದೆ ಎಂದು ಸಚಿವ ಸಂತೋಷ ಎಸ್.ಲಾಡ್ ತಿಳಿಸಿದರು.

ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಮಾತನಾಡಿ, ಜಿಲ್ಲೆಯ ಕೈಗಾರಿಕಾ ವಲಯಗಳಲ್ಲಿ ಉದ್ಯೋಗ ಮೇಳ ಆಯೋಜನೆ ಕುರಿತು ಸಭೆ ಜರುಗಿಸಿ, ಕಾರ್ಮಿಕರ ಬೇಡಿಕೆ ಪಟ್ಟಿ ಪಡೆಯಲಾಗುತ್ತದೆ ಎಂದು ತಿಳಿಸಿದರು.

> ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗ ಆಕಾಂಕ್ಷಿಗಳಿಗೆ ಕೈಗಾರಿಕೆಗಳು ಉದ್ಯೋಗ ನೀಡಿದಲ್ಲಿ ಉದ್ಯೋಗಿಗೆ ಸರಕಾರದ ಕಾರ್ಮಿಕ ಇಲಾಖೆಯಿಂದ ಆಶಾದೀಪ ಯೋಜನೆಯಡಿ ಎರಡು ವರ್ಷಗಳವರೆಗೆ ಪ್ರತಿ ತಿಂಗಳು 6 ಸಾವಿರ ರೂ.ಗಳ ಸಹಾಯಧನ ನೀಡುತ್ತದೆ. ಕೈಗಾರಿಕೆಗಳು ಎಸ್.ಸಿ., ಎಸ್.ಟಿ. ಸಮುದಾಯದವರಿಗೆ ಉದ್ಯೋಗ ನೀಡಿ ಪ್ರೋತ್ಸಾಹಿಸಬೇಕು ಮತ್ತು ಆಶಾದೀಪ ಯೋಜನೆ ಪ್ರಯೋಜನ ಪಡೆಯಬೇಕು.
>
> **– ಸಂತೋಷ್ ಲಾಡ್.**
> **ಕಾರ್ಮಿಕ ಇಲಾಖೆ ಸಚಿವರು.**

ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಗೋಪಾಲ ಬ್ಯಾಕೋಡ ವೇದಿಕೆಯಲ್ಲಿದ್ದರು. ಜಿ.ಪಂ ಯೋಜನಾ ನಿರ್ದೇಶಕಿ ರೇಖಾ ಡೊಳ್ಳಿನವರ ಸ್ವಾಗತಿಸಿದರು. ಕೌಶಲ್ಯಾಭಿವೃದ್ಧಿ ಅಧಿಕಾರಿ ರವೀಂದ್ರ ದ್ಯಾಬೇರಿ ಸಭೆ ನಿರ್ವಹಿಸಿ, ವಂದಿಸಿದರು.

ಸಭೆಯಲ್ಲಿ ಕೈಗಾರಿಕೆ, ಕಾರ್ಮಿಕ, ಕೌಶಲ್ಯಾಭಿವೃದ್ಧಿ ಇಲಾಖೆಗಳು, ಕಾಲೇಜು ಶಿಕ್ಷಣ, ಐಟಿಐ, ಇಂಜಿನಿಯರಿಂಗ್ ಕಾಲೇಜುಗಳು, ಚೇಂಬರ್ ಆಫ್ ಕಾಮರ್ಸ್, ತಾರಿಹಾಳ ಮತ್ತು ಬೇಲೂರು ಕೈಗಾರಿಕಾ ಪ್ರದೇಶದ ಸಂಘಗಳ ಪದಾಧಿಕಾರಿಗಳು, ವಿವಿಧ ಕೈಗಾರಿಕೋದ್ಯಮಿಗಳು ಭಾಗವಹಿಸಿದ್ದರು.

### ಸೇವಾಲಾಲ ಮಹಾರಾಜರ 286ನೇ ಜಯಂತ್ಯುತ್ಸವದಲ್ಲಿ ಗುರುಲಿಂಗ ಮಹಾಸ್ವಾಮಿಗಳು

# ಧರ್ಮ ಹಾಳು ಮಾಡುವವರ ಬಗ್ಗೆ ಎಚ್ಚರವಿರಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿವಿಧತೆಯಲ್ಲಿ ಏಕತೆಯಲ್ಲಿ ಏಕತೆ ಹೊಂದಿದ ಶ್ರೇಷ್ಠವಾದ ಭಾರತದಲ್ಲಿ ಧರ್ಮ, ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯ ಉಳಿಸಲು ಮತ್ತು ಸಮಾಜದ ಏಳಿಗೆಗಾಗಿ ಸಮರ್ಪಿಸಿಕೊಂಡ ಶರಣರು, ಸಂತರು, ಧರ್ಮ ಗುರುಗಳು, ಸ್ವಾತಂತ್ರ್ಯ ಹೋರಾಟಗಾರರು ತೇ-ೂರಿದ ಮಾರ್ಗದಲ್ಲಿ ಎಲ್ಲರೂ ಎಚ್ಚರಿಕೆಯ ಹೆಜ್ಜೆಗಳನ್ನಿಡಬೇಕಾಗಿದೆ ಎಂದು ಅಗಡಿ ಅಕ್ಕಿಮಠದ ಗುರುಲಿಂಗ ಮಹಾಸ್ವಾಮಿಗಳು ಹೇಳಿದರು. ಅವರು ಶನಿವಾರ ತಾಲೂಕಿನ ಆದ್ರಳ್ಳಿ ತಾಂಡಾದಲ್ಲಿ ಹಮ್ಮಿಕೊಳ್ಳಲಾಗಿದ್ದ ಸೇವಾಲಾಲ ಮಹಾರಾಜರ 286ನೇ ಜಯಂತ್ಯುತ್ಸವದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು. ಸ್ವಧರ್ಮನಿಷ್ಠೆ, ಪರಧರ್ಮ ಸಹಿಷ್ಣುತೆ ಹೊಂದಿದ ಹಿಂದೂಗಳಲ್ಲೇ ಒಡಕು ಮೂಡಿಸಿ ಧರ್ಮ ಹಾಳು ಮಾಡುವವರ ಬಗ್ಗೆ ಎಚ್ಚರಗೊಳ್ಳಬೇಕಿದೆ. ಯಾವುದೇ ಆಸೆ-ಆಮಿಷ, ಕ್ಷಣಿಕ ಸುಖಕ್ಕಾಗಿ ಅನ್ಯ ಧರ್ಮಕ್ಕೆ ಮತಾಂತರಗೊಳ್ಳುವ ಕಾರ್ಯ ಹೆತ್ತ ತಾಯಿಗೆ ಮಾಡಿದ ದ್ರೋಹವಾಗಿದೆ. ಧರ್ಮ, ಸಮಾಜದ ರಕ್ಷಣೆ, ಶ್ರೇಯೋಭಿವೃದ್ಧಿಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಾಗಿರುವ ಆದ್ರಳ್ಳಿಯ ಗವಿಮಠದ ಕುಮಾರ ಮಹಾರಾಜರ ಬೆನ್ನಿಗೆ ಸಮಾಜ ನಿಲ್ಲಬೇಕು ಎಂದರು. ಆದ್ರಳ್ಳಿ ಗವೀಮಠದ ಡಾ. ಕುಮಾರ ಮಹಾರಾಜರು ಮಾತನಾಡಿ, ಬಂಜಾರ ಸಮಾಜದ ಅಮಾಯಕ, ಮುಗ್ಧ ಜನರನ್ನು ಮರಳು ಮಾಡಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ ರಾಜಕಾರಣಿಗಳು, ಸಮಾಜದ ಮುಖಂಡರ ಬಗ್ಗೆ ಸಮಾಜ ಬಾಂಧವರು ಜಾಗೃತರಾಗಬೇಕು. ತಾಂಡಾಗಳಲ್ಲಿನ ಜನರು ಅಗತ್ಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಗೋವಾದಂತಹ ಮಾಯಾಲೋಕಕ್ಕೆ ತುತ್ತಿನ ಚೀಲ ತುಂಬಿಕೊಳ್ಳಲು ವಲಸೆ ಹೋಗಿ ಮತಾಂತರಕ್ಕೆ ಬಲಿಯಾಗುತ್ತಿದ್ದಾರೆ.



ಆದ್ರಳ್ಳಿ ತಾಂಡಾದ ಸುತ್ತಲೂ ಅನೇಕ ವರ್ಷಗಳಿಂದ ರಾಜಾರೋಷವಾಗಿ ಅಕ್ರಮ ಕಲ್ಲು, ಮರಳು ಗಣಿಗಾರಿಕೆ ನಡೆಯುತ್ತಿದೆ. ಅಕ್ರಮ ಅಟ್ಟಹಾಸದಿಂದ ಜನರ ಆರೋಗ್ಯ, ನೆಮ್ಮದಿ, ನಿದ್ದೆ, ಸಂತೋಷ ಕಸಿದಿದೆ. ಆದರೆ ಸಮಾಜದ ಹೆಸರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಸಮಾಜದ ಸಂಘದವರು, ರಾಜಕಾರಣಿಗಳು, ಅಧಿಕಾರಿಗಳು ಅಕ್ರಮ ದಂದ-ಕೋರರ ಶ್ರೀರಕ್ಷೆಗೆ ನಿಂತಿದ್ದಾರೆ. ಸಮಾಜದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ನಡೆಯುತ್ತಿರುವ ಅಕ್ರಮ-ಅನ್ಯಾಯದ ವಿರುದ್ಧ ತಾವು ಎಂತಹ ಹೋರಾಟ-ತ್ಯಾಗಕ್ಕೂ ಸಿದ್ಧ ಎಂದರು. ಶ್ರೀರಾಮ ಸೇನೆ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಮಾತನಾಡಿ, ಆದ್ರಳ್ಳಿ ತಾಂಡಾದ ಸರ್ಕಾರಿ ಜಾಗೆಯಲ್ಲಿ ಚರ್ಚ್ ನಿರ್ಮಿಸಿಕೊಂಡು ಇಲ್ಲಿನ ಅಮಾಯಕ ಜನರನ್ನು ಮತಾಂತರ ಮಾಡುತ್ತಿರುವ ಮತಾಂಧರು ಇನ್ನು 15 ದಿನಗಳಲ್ಲಿ ಚರ್ಚ್ ಖಾಲಿ ಮಾಡಿ ಓಡಿ ಹೋಗಬೇಕು.

> ದೇಶ, ಧರ್ಮ, ಸಮಾಜದ ಉದ್ಧಾರಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡ ನಾಡಿನಲ್ಲಿ ಇಂದು ಯುವಕರಲ್ಲಿ ದೇಶ, ಧರ್ಮ, ಜಾತಿ ಬಗ್ಗೆ ಗೌರವ, ಸ್ವಾಭಿಮಾನ ಇಲ್ಲದಂತಾಗಿ ದುಶ್ಚಟ, ಆಸೆ-ಆಮಿಷಗಳಿಗೆ ಬಲಿಯಾಗುತ್ತಿರುವುದು ವಿಷಾದದ ಸಂಗತಿ. ಆದರೆ ಮೂಗುದಾರ ಹಾಕಲು ಕಂಕಣಬದ್ಧರಾಗಿರುವ ಧರ್ಮಗುರುಗಳ, ಧರ್ಮಾಭಿಮಾನಿಗಳ ಕಾರ್ಯಕ್ಕೆ ಶ್ರೀರಾಮಸೇನೆ ಬದ್ಧವಾಗಿದೆ. ಆದ್ರಳ್ಳಿ ಸೇರಿ ರಾಜ್ಯದ ವಿವಿಧ ತಾಂಡಾಗಳಲ್ಲಿನ ಬಡ-ಮುದ್ದರನ್ನು ಗುರಿಯಾಗಿಸಿಕೊಂಡು ಮತಾಂತರ ಮಾಡುತ್ತಿರುವವರನ್ನು ಶ್ರೀರಾಮಸೇನೆ ಒದ್ದು ಓಡಿಸಲು ಬದ್ಧವಾಗಿದೆ.
>
> **– ಗಂಗಾಧರ ಕುಲಕರ್ಣಿ.**
> **ಶ್ರೀರಾಮ ಸೇನೆ ರಾಜ್ಯಾಧ್ಯಕ್ಷ.**


▶▶ 2ನೇ ಪುಟಕ್ಕೆ

## ಸಚಿವ ಸಂತೋಷ ಲಾಡ್ ಜನ್ಮದಿನ ಆಚರಣೆ ಫೆ.27ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಚಿತ್ರದುರ್ಗದ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ವತಿಯಿಂದ ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರ ಜನ್ಮದಿನವನ್ನು ಫೆ. 27ರಂದು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಟ್ರಸ್ಟ್‌ನ ಜಿಲ್ಲಾ ಘಟಕದ ಸಂಚಾಲಕ ಶಿವಾನಂದ ಗೋಗೇರಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡವರ, ದೀನದಲಿತರ ಬಗ್ಗೆ ಕಾಳಜಿ, ರಕ್ಷಣೆ ಹಾಗೂ ಸದಾಕಾಲ ಕಾರ್ಯಚಟವಟಿಕೆಯಿಂದ ಸೇವೆ ಸಲ್ಲಿಸುತ್ತಿರುವ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ನೂರು ಕಾಲ ಆರೋಗ್ಯವಂತರಾಗಿರಲಿ ಎಂದು ಹಾರೈಸಿ ಫೆ. 27ರಂದು ಬೆಳಿಗ್ಗೆ ವೀರೇಶ್ವರ ಪುಣ್ಯಾಶ್ರಮದಲ್ಲಿ ಉಭಯ ಗವಾಯಿಗಳಾದ ಪಂಚಾಕ್ಷರ ಗವಾಯಿಗಳು ಹಾಗೂ ಪುಟ್ಟರಾಜ ಗವಾಯಿಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಕಲ್ಲಯ್ಯಜ್ಜನವರ ತಲಾಭಾರ ಸೇವೆ ಜರುಗಲಿದೆ ಎಂದರು.




ಮಧ್ಯಾಹ್ನ ನಗರದ ಪಿಪಿಜಿ ಬಿಎಡ್ ಕಾಲೇಜಿನಲ್ಲಿ ಸೈನಿಕ, ರೈತ, ಸಂಗೀತ, ಸಂಶೋಧನೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 10 ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ವೀರೇಶ್ವರ ಪುಣ್ಯಾಶ್ರಮದಲ್ಲಿ ಭಕ್ತರಿಗೆ ಹಾಗೂ ಅಂಧ ವಿದ್ಯಾರ್ಥಿಗಳಿಗೆ ಪ್ರಸಾದ ವಿತರಣೆ ಜರುಗಲಿದೆ ಎಂದರು.

ಚಿತ್ರದುರ್ಗದ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ವತಿಯಿಂದ ರಾಜ್ಯದ 15 ಜಿಲ್ಲೆಯಲ್ಲೂ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಉದ್ದೇಶಿಸಲಾಗಿದ್ದು, ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 130ಕ್ಕೂ ಹೆಚ್ಚು ಸಾಧಕರಿಗೆ ಸನ್ಮಾನ ನಡೆಯಲಿದೆ ಎಂದು ವಿವರಿಸಿದರು.

ಮುಖಂಡರಾದ ವೀರಪ್ಪ ತೆಗ್ಗಿನಮನಿ, ಬಸವರಾಜ ತಳವಾರ, ವೀರೇಶ ಪರಸಣ್ಣವರ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಇದ್ದರು.

### ಡಾ. ಧನ್ನೂರರ ಪಿಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವದಲ್ಲಿಗುರುಪಾದ ದೇವರು

# ನಮ್ಮ ಇತಿಹಾಸವನ್ನು ನಾವು ತಿಳಿದಿರಬೇಕು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಂಗೀತ ಕ್ಷೇತ್ರಕ್ಕೆ ರೋಣ ತಾಲೂಕಿನ ಕೊಡುಗೆ ಅಪಾರ. ನಮ್ಮ ಇತಿಹಾಸವನ್ನು ನಾವು ತಿಳಿದುಕೊಂಡಿರಬೇಕು. ರೋಣದ ನೀಲಕಂಠ ಬುವಾ, ಮರಿಯಪ್ಪ, ಅಮರಗೋಳ್ಕರ ಮುಂತಾದವರು ಸಂಗೀತ ಕ್ಷೇತ್ರಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಡಾ. ಕೆ.ಬಿ. ಧನ್ನೂರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಮರಗೋಳ್ಕರ ಹೆಸರಿನಲ್ಲಿ ಸಂಗೀತ ಪಾಠಶಾಲೆಯನ್ನು ಪ್ರಾರಂಭಿಸಿದ್ದು ಸ್ತುತ್ಯವಾದ ಕಾರ್ಯ ಎಂದು ರೋಣ ಗುಲಗಂಜಿ ಮಠದ ಶ್ರೀ ಗುರುಪಾದ ದೇವರು ಹೇಳಿದರು.

ಪಟ್ಟಣದ ಡಾ. ಕೆ.ಬಿ. ಧನ್ನೂರ ಪಿಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಸಾಹಿತ್ಯ, ಸಂಗೀತ, ಕಲೆಯ ಜ್ಞಾನದ ಅಭಿರುಚಿ ಇಲ್ಲದವನನ್ನು ಪಶು ಎಂದು ಹಿರಿಯರು ಕರೆದಿದ್ದಾರೆ. ನೀವು ಚಿಕ್ಕಂದಿನಲ್ಲಿಯೇ ಈ ಜ್ಞಾನವನ್ನು ಹೊಂದಿದರೆ ನಿಮ್ಮ ಮನಸ್ಸು ಯಾವಾಗಲೂ ಶಾಂತವಾಗಿರುತ್ತದೆ. ನಿಮ್ಮ ವ್ಯಕ್ತಿತ್ವಕ್ಕೊಂದು ಮೆರಗು ಬರುತ್ತದೆ ಎಂದು ಹೇಳಿದ ಶ್ರೀಗಳು, ಡಾ. ಕೆ.ಬಿ. ಧನ್ನೂರ ಕೇವಲ ವೈದ್ಯಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಸಮಾಜದ ಸರ್ವ ಕ್ಷೇತ್ರಗಳಲ್ಲಿಯೂ ತಮ್ಮ ಸಾಧನೆಯನ್ನು ತೋರಿಸಿದ್ದಾರೆ. ಇಲ್ಲಿನ ಸಂಗೀತ ಪಾಠಶಾಲೆಯನ್ನು ನಾನು ಸಂತೋಷದಿಂದ ಉದ್ಘಾಟಿಸಿದ್ದೇನೆ ಎಂದರು. ಸಭಾಭವನವನ್ನು ಉದ್ಘಾಟಿಸಿದ ಧುರೀಣ ಮಿಥುನ್ ಪಾಟೀಲ ಮಾತನಾಡಿ, ಈ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಆದ್ದರಿಂದ ಇಲ್ಲಿ ನೂರಕ್ಕೆ ನೂರು ಫಲಿತಾಂಶ ಬರುತ್ತಿದೆ. ಪ್ರತಿಭಾವಂತ ಶಿಕ್ಷಕ ವರ್ಗ ಇರುವದರಿಂದ ಪ್ರತಿಭಾಶಾಲಿ ಮಕ್ಕಳು ಈ ಶಾಲೆಯಿಂದ ಹೊರಬರುತ್ತಿರುವುದು ಸಂತಸದ ಸಂಗತಿ ಎಂದರು. ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಕ್ಷಯ ಪಾಟೀಲ ಮಾತನಾಡಿ, ವಿದ್ಯೆ ಯಾರೂ ಕದಿಯದ ಸಂಪತ್ತು. ನೀವು ಅದನ್ನು ಈಗಲೇ ಸಂಪಾದಿಸಿಕೊಳ್ಳಬೇಕು. ಅದಕ್ಕೆ ಬೇಕಾದ ಎಲ್ಲ ವಾತಾವರಣ ಈ ಶಾಲೆಯಲ್ಲಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಎಂದರು. ಡಾ. ಕೆ.ಬಿ. ಧನ್ನೂರ ಅಧ್ಯಕ್ಷತೆ ವಹಿಸಿದ್ದರು. ಎಂ.ಎಸ್. ದರ್ಢೇಸೂರಮಠ ಮಾತನಾಡಿದರು. ಐ.ಎಸ್. ಪಾಟೀಲ, ಎಂ.ಎ. ಹಿರೇವಡೆಯರ, ಯೂಸುಫ್ ಇಟಗಿ, ಕುಮಾರಸ್ವಾಮಿ ಕೋರಧಾನ್ಯಮಠ, ಸುನೀಲ ಬಸವರಡ್ಡೇರ, ಕಸ್ತೂರಿ ಧನ್ನೂರ, ಪಾರ್ವತಿ ದೊಡ್ಡಣ್ಣವರ, ಪ್ರಕಾಶ ಪಲ್ಲೇದ, ಬಿ.ಜಿ. ಹಳ್ಳೂರ, ಉಮೇಶ ಅರಹುಣಶಿ, ಎಸ್.ಎ. ಪಾಟೀಲ, ಶೇಖಪ್ಪ ಕೆಂಗಾರ, ಮೈಲಾರಪ್ಪ ಚಳ್ಳಮರದ, ಅಲ್ಲಾಭಕ್ಷಿ ನದಾಫ್, ಕಳಕನಗೌಡ ಪೊಲೀಸ್‌ಪಾಟೀಲ ಇನ್ನಿತರರಿದ್ದರು.

ಆರ್.ಎನ್. ನಾಗಠಾಣ ಸ್ವಾಗತಿಸಿದರು. ಶ್ವೇತಾ ಬಾಗೇವಾಡಿ ನಿರೂಪಿಸಿದರು. ರಶ್ಮಿ ಬಸವರಡ್ಡೇರ ವಾರ್ಷಿಕ ವರದಿ ಓದಿದರು. ಮಲ್ಲನಗೌಡರ ವಂದಿಸಿದರು.



> ಗ್ರಾಮೀಣ ಭಾಗದಲ್ಲಿ ಮೊತ್ತಮೊದಲು ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದವರು ಡಾ. ಧನ್ನೂರರು. ಇಂದಿಗೆ 37 ವರ್ಷಗಳನ್ನು ಪೂರೈಸಿ 38ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶಾಲೆ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲಿ. ಇಂದು ಉದ್ಘಾಟನೆಯಾದ ಬಸಲಿಂಗಪ್ಪ ಧನ್ನೂರ ಸಭಾ ಭವನಕ್ಕೆ ಅಗತ್ಯವಾದ ಅನುದಾನವನ್ನು ನೀಡಲು ಕ್ರಮ ವಹಿಸಲಾಗುವುದು.
>
> **– ಜಿ.ಎಸ್. ಪಾಟೀಲ.**
> **ಶಾಸಕರು.**

ಸಂಪಾದಕೀಯ

# ಬಸವ ತತ್ವ ಪ್ರಚಾರಕ್ಕೆ ಬೇಕು ಮಠಾಧೀಶರ ಇಚ್ಛಾಶಕ್ತಿ

ಲಿಂಗಾಯತ ಮಠಾಧೀಶರ ನಿಯೋಗ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬಸವಣ್ಣ ಮತ್ತು ಬಸವ ಧರ್ಮದ ಕಲ್ಯಾಣಕ್ಕಾಗಿ ಅನುದಾನ ಮೀಸಲಿರಿಸುವಂತೆ ಕೋರಿದ್ದಾರೆ.

ಲಿಂಗಾಯತ ಧರ್ಮ, ವಚನ ಸಂಸ್ಕೃತಿ ಮತ್ತು ಬಸವಣ್ಣನ ಆಶಯಗಳನ್ನ ಪ್ರಚಾರಪಡಿಸುವ ಕಾರ್ಯ ಅತ್ಯವಶ್ಯಕವಾಗಿ ಆಗಬೇಕಿದೆ. ಜಾತಿ ವ್ಯವಸ್ಥೆ ಬೇರೂರಿರುವ ಈ ಸಮಾಜದಲ್ಲಿ, ಸಮ ಸಮಾಜವನ್ನು ಪ್ರತಿಪಾದಿಸಿದ ಬಸವಣ್ಣನ ವಿಚಾರಧಾರೆಗಳು ಜನಮಾನಸಕ್ಕೆ ತಲುಪಬೇಕಾದ ಅಗತ್ಯವಿದೆ.

ಆದರೆ ಲಿಂಗಾಯತ ಮಠಾಧೀಶರು ಸಲ್ಲಿಸಿರುವ ಬೇಡಿಕೆ ನೋಡಿದರೆ, ಆ ಯಾವ ಬೇಡಿಕೆಯಿಂದಲೂ ಬಸವಣ್ಣನ ವಿಚಾರಧಾರೆಗಳು ಜನಮನಕ್ಕೆ ತಲುಪಲು ಸಾಧ್ಯವಿಲ್ಲ. ಮುಂದಿನ ಐದು ವರ್ಷಕ್ಕೆ 500 ಕೋಟಿ ಸಲ್ಲಿಸಿರುವ ಮನವಿ ಹಾಸ್ಯಸ್ಪದವಾಗಿದೆ.

ಇನ್ನು ಸ್ಥಾವರಕ್ಕೆ ಅಳಿವುಂಟು ಎಂದು ಪ್ರತಿಪಾದಿಸಿದ ಬಸವಣ್ಣನ ಮೂರ್ತಿ ನಿರ್ಮಾಣಕ್ಕೆ 25 ಕೋಟಿ ರೂಪಾಯಿ ಕೇಳಿದ್ದಾರೆ. ಶರಣ ಸ್ಮಾರಕ ರಕ್ಷಣೆ ಪ್ರಾಧಿಕಾರಕ್ಕೆ ಬೇಡಿಕೆ ಸಲ್ಲಿಸಿದ್ದಾರೆ. ಜಿಲ್ಲಾ ಕೇಂದ್ರಕೊಂದು ಬಸವ ಭವನ ನಿರ್ಮಾಣ ಮಾಡುವಂತೆ ಒತ್ತಾಯಿಸಿದ್ದಾರೆ. ಹೀಗೆ ಪ್ರಮುಖ ಬೇಡಿಕೆಗಳ ಪಟ್ಟಿಯನ್ನು ಮಠಾಧೀಶರ ನಿಯೋಗ ಮುಖ್ಯಮಂತ್ರಿಗಳಿಗೆ ನೀಡಿದೆ. ಒಂದೆರಡು ಸಲಹೆಗಳು ಉತ್ತಮವಾಗಿದ್ದರು ಬಹುತೇಕ ಎಲ್ಲ ಸಲಹೆಗಳು ಸರ್ಕಾರದಿಂದ ನೆರವು ಕೇಳುವಂತಥವುಗಳೆ ಆಗಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಎಲ್ಲ ಜಾತಿ ಧರ್ಮಗಳನ್ನು ಸಮಾನವಾಗಿ ಕಾಣಬೇಕಿದೆ. ಹೀಗಾಗಿ ಲಿಂಗಾಯತ ಧರ್ಮಕ್ಕಾಗಿ ಕೋಟ್ಯಂತರ ರೂಪಾಯಿ ಅನುದಾನ ಮೀಸಲಿಡಲು ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಬಸವಣ್ಣ ಮತ್ತು ಬಸವ ತತ್ವದ ಪ್ರಚಾರ ಲಿಂಗಾಯತ ಮಠಾಧೀಶರಿಗೆ ಸೇರಿದ್ದು. ಲಿಂಗಾಯತ ಮಠಗಳು ಇವತ್ತು ಬಸವ ಧರ್ಮ ಪ್ರಚಾರ ಮಾಡುವ ಬದಲಿಗೆ ಶೈವ ಪರಂಪರೆ ಆಚರಣೆಗೆ ಪ್ರಚೋದನೆ ನೀಡುತ್ತಿವೆ. ಮೊದಲು ಲಿಂಗಾಯತ ಮಠಗಳು ಬಸವ ತತ್ವ ಪ್ರಚಾರದ ಕಾರ್ಯ ಕೈಗೊಳ್ಳಲಿ. ಆಗ ಸರ್ಕಾರದಿಂದ ಒಂದಷ್ಟು ನೆರವು ಕೇಳಿದರೆ, ಬಸವಣ್ಣ ಮತ್ತು ಬಸವ ಧರ್ಮಕ್ಕೆ ಖಂಡಿತ ಸಹಾಯ, ಸಹಕಾರ ಸಿಗುತ್ತದೆ.

ಸಂಶೋಧನಾ ವಿಧಾನ-ಅನುದಾನ ಬರವಣಿಗೆ ಕುರಿತ ಕಾರ್ಯಾಗಾರಕ್ಕೆ ಚಾಲನೆ

# ಸಂಶೋಧನೆಗಳು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಭಾಗ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಅತ್ಯುತ್ತಮವಾದ ಸಂಶೋಧನೆಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಒಳ್ಳೆಯ ಸಂಶೋಧನೆಗಳು ರಾಷ್ಟ್ರದ ಅಭಿವೃದ್ಧಿಗೆ ಸಹಾಯಕವಾಗುತ್ತವೆ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯಿದೆ ಎಂದು ಬೆಂಗಳೂರಿನ ಕಿಟ್ಸ್ ಸಂಸ್ಥೆಯ ವ್ಯವಸ್ಥಾಪಕಿ ಅರ್ಚನಾ ಸಿ ನುಡಿದರು.

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್), ಸ್ಟಾರ್ಟ್‌ಅಪ್ ಕರ್ನಾಟಕ, ಕಿಟ್ಸ್ ಸಂಸ್ಥೆ, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ವಿಭಾಗ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಸಹಯೋಗದಲ್ಲಿ ಧಾರವಾಡದ ನಗರದಲ್ಲಿ ಫೆ.24ರಂದು ಆಯೋಜಿಸಿದ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಒತ್ತಡ, ಖಿನ್ನತೆ ಹಾಗೂ ಆತಂಕ ಕಾಯಿಲೆ ಮುಂತಾದ ಮಾನಸಿಕ ಕಾಯಿಲೆಗಳಿಗೆ ಕೃತಕ ಬುದ್ಧಿಮತ್ತೆಯಿಂದ ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ಸಂಶೋಧನಾ ಚಟುವಟಿಕೆಗಳು ಪ್ರಾರಂಭವಿಸುವಲ್ಲಿ ವಿವಿಧ ಸಂಸ್ಥೆಗಳು ಮುಂದೆ ಬರುತ್ತಿವೆ. ಡಿಮ್ಹಾನ್ಸ್ ಸಂಸ್ಥೆಯು ಈ ನಿಟ್ಟಿನಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಪ್ರಾರಂಭಿಸಿರುವುದು ಸಂತೋಷದ ವಿಷಯ. ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ಸಂಶೋಧಕರು ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾಹಿತಿ ಪಡೆದುಕೊಂಡು ಹೊಸ ಸಂಶೋಧನೆಗಳನ್ನು ಮಾಡಲು ಆಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂದರು.

ಡಿಮ್ಹಾನ್ಸ್ ನಿರ್ದೇಶಕ ಡಾ. ಅರುಣಕುಮಾರ ಸಿ ಮಾತನಾಡಿ, ಇಂದು ನೂತನ ಸಂಶೋಧನೆಗಳು ಮತ್ತು ಸಮಾಜದ ಒಳಿತಿಗಾಗಿ ಬೇಕಾಗಿರುವ ಸಂಶೋಧನೆಗಳು ಅಗತ್ಯವಾಗಿವೆ. ಸಂಶೋಧನಾ ವಿದ್ಯಾರ್ಥಿಗಳು, ವೃತ್ತಿಪರ ಸಂಶೋಧಕರು, ವಿದ್ಯಾರ್ಥಿಗಳು ಹೊಸ ಸಂಶೋಧನೆಗಳಿಗೆ ಇರುವ ಸಾಕಷ್ಟು ಅವಕಾಶಗಳನ್ನು ತಿಳಿದುಕೊಳ್ಳಬೇಕಾಗಿದೆ. ಡಿಮ್ಹಾನ್ಸ್ ಸಂಸ್ಥೆ ಹಾಗೂ ಇತರ ಸಂಸ್ಥೆಗಳಿಂದ ಆಯೋಜಿದ ಇಂತಹ ಕಾರ್ಯಾಗಾರದ ಸದ್ಬಳಕೆ ಮಾಡಿಕೊಳ್ಳಬೇಕೆಂದರು.

ಸಂಶೋಧನೆಗಳು ಕೇವಲ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದಲ್ಲ. ಸಂಶೋಧನೆ ಹೊಸ ಜ್ಞಾನವನ್ನು ಕೊಡುವುಂತಹದ್ದು, ಸಮಸ್ಯೆಗಳಿಗೆ ಪರಿಹಾರ ಹುಡುಕಿ ಸಮಾಜಕ್ಕೆ ಒಳ್ಳೆಯ ಕೊಡುಗೆಗಳನ್ನು ನೀಡುವುದು ಒಳ್ಳೆಯ ಸಂಶೋಧನೆಯ ಲಕ್ಷಣವಾಗಿದೆ ಎಂದರು.

ಡಿಮ್ಹಾನ್ಸ್ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ಮಾತನಾಡಿ, ಪದವಿ ವಿದ್ಯಾರ್ಥಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಯುವ ಉದ್ಯಮಿಗಳಿಗೆ ಕಾರ್ಯಾಗಾರದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಭ್ಯವಿರುವ ಸಂಶೋಧನಾ ಯೋಜನೆಗಳಿಗೆ ಇರುವ ಹಣಕಾಸಿನ ಲಭ್ಯತೆ ಹಾಗೂ ಇತರ ಅವಶ್ಯಕ ಬರವಣಿಗೆಗಳ ಕುರಿತು ತಿಳಿಸಿಕೊಡುವುದು ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದ್ದು ಇವುಗಳನ್ನು ಸರಿಯಾಗಿ ಮಾಡಿಕೊಂಡು ಉತ್ತಮ ಸಂಶೋಧಕರಾಗಬೇಕು. ಸಮಾಜದಲ್ಲಿ ಒಳ್ಳೆಯ ಸಂಶೋಧನೆಗಳಿಗೆ ಬೇಡಿಕೆಯಿದೆ. ಸಂಕೀರ್ಣ ಸ್ವರೂಪದ ಸಮಸ್ಯೆಗಳಿಗೆ ಉತ್ತಮವಾದ ಸಂಶೋಧನೆಯಿಂದ ಪರಿಹಾರಕಂಡುಕೊಳ್ಳಲು ಪ್ರಯತ್ನಿಸಬೇಕಾಗಿದೆ ಎಂದರು.

ಈ ಕಾರ್ಯಾಗಾರಕದಲ್ಲಿ ಅತಿಥಿಗಳಾಗಿ ಪ್ರೊ. ಎಸ್.ಆರ್. ಮಹದೇವ ಪ್ರಸನ್ನ ಭಾಗವಹಿಸಿ ಮಾತನಾಡಿದರು. ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಪ್ರಾರಂಭದ ಹಂತದಲ್ಲಿ ರೋಗ ಗುರುತಿಸುವಿಕೆಯಲ್ಲಿ ಪ್ರಮುಖ ಪಾತ್ರವಹಿಸುವ ದಿನಗಳು ದೂರವಿಲ್ಲವೆಂದರು.

ಡಿಮ್ಹಾನ್ಸ್ ಸಂಸ್ಥೆ ಹಾಗೂ ಐಐಐಟಿ ಧಾರವಾಡ ಸಂಸ್ಥೆಗಳೂ ಸೇರಿ ಸಂಶೋಧನಾ ಚಟುವಟಿಕೆಗಳನ್ನು ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಪ್ರಾರಂಭಿಸಲಾಗಿದೆ. ಇನ್ನು ಹಲವು ಸಂಶೋಧನಾ ಕಾರ್ಯಾಚಟುವಟಿಕೆಗಳನ್ನು ಮಾಡಲು ಉದ್ದೇಶಿಸಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ವೈದ್ಯಕೀಯ, ಅರೆವೈದ್ಯಕೀಯ, ಸಮಾಜಕಾರ್ಯ ಹಾಗೂ ಇತರ ಕ್ಷೇತ್ರಗಳಿಂದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಗಳು ಭಾಗವಹಿಸಿದ್ದರು.

ದೇಶದ ವಿವಿಧ ಸಂಸ್ಥೆಗಳ ಪ್ರಾಧ್ಯಾಪಕರು ಹಾಗೂ ತಜ್ಞರು ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿ, ವಿವಿಧ ವಿಷಗಳ ಮೇಲೆ ವಿಷಯ ಮಂಡನೆ ಮಾಡಿದರು.

ಕಾರ್ಯಾಗಾರದ ಸಂಘಟನಾ ಸಮಿತಿಯ ಮುಖ್ಯಸ್ಥ ಡಾ. ಶ್ರೀನಿವಾಸ ಕೊಸಗಿ, ಸಹ-ಸಂಘಟನಾ ಸಮಿತಿಯ ಮುಖ್ಯಸ್ಥ ಡಾ. ಶಿವರುದ್ರಪ್ಪ ಭೈರಪ್ಪನವರ, ಕಾರ್ಯದರ್ಶಿ ಡಾ. ಸುಶೀಲ ಕುಮಾರ ರೋಣದ, ಖಜಾಂಚಿ ಡಾ. ಮಂಜುನಾಥ ಭಜಂತ್ರಿ, ಜಂಟಿ ಕಾರ್ಯದರ್ಶಿ ಡಾ. ಮೇಘಮಾಲಾ ಟಿ, ಅಶೋಕ ಕೋರಿ, ಆರ್.ಎಮ್. ತಿಮ್ಮಾಪೂರ, ಮಲ್ಲಿಕಾ ಬಿ.ಎನ್., ಸುಷ್ಮಾ ಸಿ. ಹಾಗೂ ಇತರ ಅತಿಥಿಗಳು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

> ಡಿಮ್ಹಾನ್ಸ್ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ಮಾತನಾಡಿ, ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಡಿಮ್ಹಾನ್ಸ್ ಸಂಸ್ಥೆಗೆ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಬರುತ್ತಿದ್ದಾರೆ. ಡಿಮ್ಹಾನ್ಸ್ ಸಂಸ್ಥೆಯಿಂದ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಡಿಮ್ಹಾನ್ಸ್ ಸಂಸ್ಥೆಯಲ್ಲಿ ನ್ಯೂರೋಸರ್ಜರಿ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ಸರಕಾರದಿಂದ ಉತ್ತಮ ಬೆಂಬಲ ದೊರಕಿದೆ ಎಂದರು.

# ಧರ್ಮ ಹಾಳು ಮಾಡುವವರ ಬಗ್ಗೆ ಎಚ್ಚರವಿರಲಿ

▶▶ ಮೊದಲನೇ ಪುಟದಿಂದ

ಇಲ್ಲದಿದ್ದರೆ ಶ್ರೀರಾಮಸೇನೆ, ಬಂಜಾರ ಸೇನೆಯ ಕಾರ್ಯಕರ್ತರು ಶ್ರೀಗಳ ನೇತೃತ್ವದಲ್ಲಿ ಚರ್ಚ್ ನೆಲಸಮಗೊಳಿಸುತ್ತೇವೆ ಎಂದು ಎಚ್ಚರಿಸಿದರು. ಕೆಪಿಸಿಸಿ ಕಾರ್ಯದರ್ಶಿ ಸುಜಾತಾ ದೊಡ್ಡಮನಿ ಮಾತನಾಡಿ, ಸಮಾಜದ ಸಹಕಾರ ಪಡೆದು ತಮ್ಮ ಕಾರ್ಯ ಸಾಧಿಸಿಕೊಂಡು ತಿರುಗಿ ಬೀಳುವ, ನಿರ್ಲಕ್ಷಿಸುವವರಿಗೆ ಸಮಾಜ ತಕ್ಕ ಪಾಠ ಕಲಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಕುಂದಗೋಳದ ಅಭಿನವ ಬಸವಣ್ಣಜ್ಜನವರು, ಧರ್ಮ ಉಳಿಸುವ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದರು. ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಪಾಂಡುರಂಗ ಪಮ್ಮಾರ ಸಮಾಜದ ಸೇವೆಗೆ ಸದಾ ಬದ್ಧ ಎಂದರು.

ಮಾಜಿ ಶಾಸಕ ಬಸವರಾಜ ನಾಯ್ಕ, ರಾಜು ಖಾನಪ್ಪನವರ ಮಾತನಾಡಿದರು. ಕಾರ್ಯಕ್ರಮ ಪೂರ್ವದಲ್ಲಿ ಸೇವಾಲಾಲ ಮಹಾರಾಜರ ಭಾವಚಿತ್ರದ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಮೆರವಣಿಗೆಯಲ್ಲಿ ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಹುಚ್ಚಪ್ಪ ಸಂಕದ, ಗೀತಾ ನಾಯಕ, ಡಾ. ವೆಂಕಟೇಶ ರಾಠೋಡ, ಗಿರೀಶ ಲಮಾಣಿ, ಸುರೇಶ ನಂದೆಣ್ಣವರ, ಸೋಮು ಲಮಾಣಿ, ಗುರು ತಿರ್ಲಾಪುರ, ಶೇಖಪ್ಪ ಲಮಾಣಿ ಸೇರಿ ಆದರಳ್ಳಿ ಮತ್ತು ಸುತ್ತಲಿನ ತಾಂಡಾಗಳ ನಾಯಕ್, ಡಾವ್, ಕಾರಬಾರಿ ಗುರು-ಹಿರಿಯರು, ಮಹಿಳೆಯರು, ಯುವಕರು ಪಾಲ್ಗೊಂಡಿದ್ದರು.

# ಕಾಂಗ್ರೆಸ್ ಗ್ಯಾರಂಟಿಗಳನ್ನು 'ಇಮಾಮ್ ಸಾಬಿಗೆ' ಹೋಲಿಕೆ ಮಾಡಿದ ಸಚಿವ ವಿ ಸೋಮಣ್ಣ!



■ ವಿಜಯಸಾಕ್ಷಿ ಸುದ್ದಿ, ತುಮಕೂರು

ಕರ್ನಾಟಕದ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳನ್ನು ಕೇಂದ್ರ ಸಚಿವ ವಿ ಸೋಮಣ್ಣ ಅವರು ಲೇವಡಿ ಮಾಡಿದ್ದಾರೆ.

ತಿಪಟೂರಿನಲ್ಲಿ ಕಿಸಾನ್ ಸಮ್ಮಾನ್ ಯೋಜನೆ ಹಣ ಬಿಡುಗಡೆ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಕಾಂಗ್ರೆಸ್ ಗ್ಯಾರಂಟಿಗಳನ್ನು ಇಮಾಮ್ ಸಾಬಿಗೆ ಹೋಲಿಕೆ ಮಾಡಿ, ಕಿಸಾನ್ ಸಮ್ಮಾನ್ ಯೋಜನೆಯನ್ನ ಗೋಕುಲಾಷ್ಟಮಿಗೆ ಹೋಲಿಕೆ ಮಾಡಿದ್ದಾರೆ ಎನ್ನಲಾಗಿದೆ. ಇಮಾಮ್ ಸಾಬಿಗೂ ಗೋಕುಲಾಷ್ಠಮಿ ಗೂ ಸಂಬಂಧ ಇದಿಯಾ? ಇಮಾಮ್ ಸಾಬಿನೆ ಬೇರೆ, ಗೋಕುಲಾಷ್ಠಮಿನೇ ಬೇರೆ. ನಮ್ಮ ಹಬ್ಬ ಬೇರೆ, ಅವರ ಹಬ್ಬ ಬೇರೆ. ಎರಡು ಒಂದೇ ಅಲ್ಲ. ಗ್ಯಾರಂಟಿಕ್ಕಿಂತ ಕಿಸಾನ್ ಸನ್ಮಾನ್ ಯೋಜನೆಯೇ ಮೇಲೂ. ಎರಡು ಒಂದೇ ಹಬ್ಬಗಳು ಎನ್ನಲು ಆಗಲ್ಲ. ರಾಷ್ಟ್ರದ ಬೆನ್ನೆಲುಬಾಗಿರುವ ರೈತರಿಗೆ ಆಶಾಕಿರಣ ಇದು. ಈಗಾಗಲೇ ಗ್ಯಾರಂಟಿ ಯೋಜನೆಗಳು ನಿಂತು ಹೋಗಿದೆ. ನಮ್ದು ಹಂಗಿಲ್ಲ. ಮೂರು-ಮೂರು ತಿಂಗಳಿಗೂ ಒಂದೊಂದು ಕಂತು ಬರ್ತಿದೆ.

ದೊಡ್ಡ ಯೋಜನೆಗಳನ್ನ ವೋಟ್ ಬ್ಯಾಂಕ್ ಯೋಜನೆಗಳಿಗೆ ಹೋಲಿಕೆ ಮಾಡಬೇಡಿ. ಪ್ರಧಾನ ಮಂತ್ರಿಗಳು ಇದನ್ನ ನಾನು ಮಾಡ್ತಿನಿ ಅಂತ ಎಲ್ಲೂ ಹೇಳಿರಲಿಲ್ಲ. ಮೂರನೇ ಬಾರಿಗೆ ಪ್ರಧಾನಿಯಾಗಿದ್ದಾರೆ ಅವರ ಚಿಂತನೆ, ಮುಂದಿನ ಪೀಳಿಗೆಗೆ ದೂರದೃಷ್ಟಿಗೆ ಹಿಡಿದ ಕೈಗನ್ನಡಿಯಾಗಿದೆ. ಗ್ಯಾರಂಟಿ ಯೋಜನೆಗೆ ಇದನ್ನ ಹೋಲಿಕೆ ಮಾಡಬೇಡಿ ಎಂದು ವಿ ಸೋಮಣ್ಣ ಹೇಳಿದ್ದಾರೆ.

# ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಾರ್ಯಾಗಾರ



■ ವಿಜಯಸಾಕ್ಷಿ ಸುದ್ದಿ, ಗದಗ

ತಾಂತ್ರಿಕ ವಿದ್ಯಾರ್ಥಿಗಳ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ತೋಂಟದಾರ್ಯ ತಾಂತ್ರಿಕ ವಿಭಾಗದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ ತನ್ನ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸಿಕೊಳ್ಳುತ್ತಿದ್ದು, ಸಿಸ್ಕೋ ಸಾಧನಗಳನ್ನು ಬಳಸಿಕೊಂಡು 'ನೆಟ್‌ವರ್ಕ್ ಸಾಧನಗಳ ಸಂರಚನೆ' ಎಂಬ ವಿಷಯದಲ್ಲಿ 5 ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಉಪ ಪ್ರಾಂಶುಪಾಲ ಡಾ. ಈರಣ್ಣಾ ಕೊರಚಗಾಂವ್ ಉದ್ಘಾಟಿಸಿ ಮಾತನಾಡಿ, ಕಾರ್ಯಾಗಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು, ಉದ್ಯಮ ವೃತ್ತಿಪರರ ಪರಿಣತಿಯನ್ನು ಬಳಸಿಕೊಳ್ಳಲು ಮತ್ತು ವಿಕಸಿಸುತ್ತಿರುವ ನೆಟ್‌ವರ್ಕಿಂಗ್ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಪ್ರಾಯೋಗಿಕ ಕೌಶಲ್ಯಗಳನ್ನು ಹೆಚ್ಚಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ರಮೇಶ್ ಎಂ.ಬಡಿಗೇರ್ ಮಾತನಾಡಿ, ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಹೆಚ್ಚಿಸುವಲ್ಲಿ, ಆ ಮೂಲಕ ಅವರ ಉದ್ಯೋಗಾವಕಾಶಗಳನ್ನು ಸುಧಾರಿಸುವಲ್ಲಿ ಅವುಗಳ ಪ್ರಮುಖ ಪಾತ್ರವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ರಮೇಶ ಬಡಿಗೇರ್ ಮತ್ತು ಪ್ರೊ. ನೀತಾ ಮುದರಡ್ಡಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಸಂಚಾಲಕರಾದ ಡಾ. ಶರ್ವಾಣಿ ಜಿ.ಎಂ ಸೇರಿದಂತೆ ಎಲ್ಲ ವಿಭಾಗದ ಮುಖ್ಯಸ್ಥರು, ಹಿರಿಯ ಉಪನ್ಯಾಸಕರು ಉಪಸ್ಥಿತರಿದ್ದರು.

ಸಂಶೋಧನಾ ಸಂಯೋಜಕಿ ಡಾ. ಅಶ್ವಿನಿ ಅರಳಿ ಅಭಿವೃದ್ಧಿ ಕೋಶದ ಮಹತ್ವ ಕುರಿತು ಮಾತನಾಡಿ ಸ್ವಾಗತಿಸಿದರು. ಡಾ. ಮಲ್ಲಿಕಾರ್ಜುನ ಜಿ.ಡಿ ನೆಟ್‌ವರ್ಕಿಂಗ್ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು. ಪ್ರೊ. ನೀತಾ ಮುದರಡ್ಡಿ ವಂದಿಸಿದರು.

# 'ರಾಜ್ಯಮಟ್ಟದ ಅತ್ಯುತ್ತಮ ಶಾಲೆ' ಪ್ರಶಸ್ತಿ




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ನಾದಿಗಟ್ಟಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಅಪ್ನಾದೇಶ್ ಬಳಗ ಮತ್ತು ಚೇತನ್ ಫೌಂಡೇಶನ್‌ದವರು ರಾಜ್ಯಮಟ್ಟದ ಅತ್ಯುತ್ತಮ ಶಾಲೆ ಎಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಟ ಪುಟ್ಟಪ್ಪ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದರು.

ಶಾಲೆಯಲ್ಲಿ ಇತ್ತೀಚೆಗೆ ಸರ್ಕಾರದ ಯೋಜನೆಗಳ ಸದ್ಬಳಕೆ, ರಸಪ್ರಶ್ನೆ ಕಾರ್ಯಕ್ರಮ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ, ವಸತಿ ಶಾಲೆಗಳ ಪ್ರವೇಶ ಪರೀಕ್ಷೆಯ ತಯಾರಿ, ಗುಂಪು ಕಲಿಕೆ, ಶಾಲೆಗೆ ಸುಣ್ಣ-ಬಣ್ಣ, ಶೌಚಾಲಯಗಳ ದುರಸ್ತಿ ಮುಂತಾದ ಚಟುವಟಿಕೆಗಳನ್ನಾಧರಿಸಿ ಮುಖ್ಯ ಶಿಕ್ಷಕ ಪೀರಸಾಬ ನದಾಫ್ ಇವರನ್ನು ಸನ್ಮಾನಿಸಿ ಪ್ರಶಸ್ತಿ ನೀಡಲಾಯಿತು.

ಈ ವೇಳೆ ಗಿರೀಶ ನೇಕಾರ, ಯಲ್ಲಪ್ಪ ತಿರಕಣ್ಣವರ, ಶ್ರೀಕಾಂತ್ ನಂದೆಣ್ಣವರ, ಚಂದ್ರಗೌಡ ಪಾಟೀಲ, ರಮೇಶ ಹೊಂಬಳ ಹನುಮಂತಪ್ಪ ಕಿಚ್ಚಾಡಿ, ಪರಸಪ್ಪ ಬಿಂಕದಕಟ್ಟಿ, ಯಲ್ಲಪ್ಪ ಕುರಿ, ನಿಂಗಪ್ಪ ಲಮಾಣಿ, ಸಿದ್ದಪ್ಪ ವಡ್ಡರ ಇದ್ದರು.

# ಜನರನ್ನು ಬದುಕಿಸುವ ಸಂಜೀವಿನಿ 'ಸಿದ್ಧಾಂತ ಶಿಖಾಮಣಿ'

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಹುಟ್ಟಿನಿಂದ ಸಾಯುವವರೆಗೂ ನಾವು ಜೀವನವನ್ನು ನಡೆಸುತ್ತೇವೆ. ಜೀವನವನ್ನು ನಡೆಸಲು ಅದಕ್ಕೆ ತನ್ನದೇ ಆದ ರೀತಿ ನಿಯಮವಿದೆ. ಈ ರೀತಿ ನಿಯಮವನ್ನು ತಿಳಿಸಿ, ಜನರನ್ನು ಬದುಕಿಸುವ ಸಂಜೀವಿನಿ ಯಾವುದಾದರೂ ಇದ್ದರೆ ಅದು ಸಿದ್ಧಾಂತ ಶಿಖಾಮಣಿ ಎಂದು ನರೇಗಲ್ಲ ಹಿರೇಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.

ಸಮೀಪದ ಕೋಚಲಾಪೂರ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಎರಡು ದಿನಗಳ ಕಾಲ ಜರುಗುವ ಆಧ್ಯಾತ್ಮಿಕ ಪ್ರವಚನದ ಮೊದಲ ದಿನ ಅವರು ಆಶೀರ್ವಚನ ನೀಡಿದರು.

ಸಿದ್ಧಾಂತ ಶಿಖಾಮಣಿ ಗ್ರಂಥವು ಮಾನವನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳ ಬಗ್ಗೆ ತಿಳಿಸುತ್ತದೆ. ಆಗೀಗ ನಿಮ್ಮ ಕಿವಿಗಳ ಮೇಲೆ ಆಧ್ಯಾತ್ಮಿಕಕ್ಕೆ ಸಂಬಂಧಿಸಿದ ವಿಷಯಗಳು ಬೀಳುತ್ತಿದ್ದರೆ ಧರ್ಮ ಮಾರ್ಗದಲ್ಲಿರುತ್ತೀರಿ. ಅದಕ್ಕೆಂದೇ ಈ ಪ್ರವಚನ ಮಾಲಿಕೆಯನ್ನು ನಾವು ಪ್ರಾರಂಭಿಸಿದ್ದೇವೆ ಎಂದು ಹೇಳಿದರು.

ಆಧ್ಯಾತ್ಮಿಕ ಪ್ರವಚನವು ಮನುಷ್ಯನ ದುಃಖವನ್ನು ಕಳೆಯುವ ದಿವ್ಯೌಷಧಿ. ಸಿದ್ಧಾಂತ ಶಿಖಾಮಣಿಯನ್ನು ಕೇಳುವದರಿಂದ ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ಇದರಿಂದ ನಿಮ್ಮ ವ್ಯಕ್ತಿತವವೂ ವಿಕಸನಗೊಳ್ಳುತ್ತದೆ. ಜನ್ಮಜನ್ಮಕ್ಕೂ ಅಂಟಿಕೊಂಡು ಬರುವುದು ಭವರೋಗ. ಈ ಭವರೋಗವನ್ನು ಕಳೆದು ನಿರಾಳತೆಯನ್ನು ನೀಡುವ ಶಕ್ತಿ ಈ ಗ್ರಂಥದಲ್ಲಿದೆ. ಸದ್ಗುರುಗಳು ಭವರೋಗವನ್ನು ವಾಸಿ ಮಾಡಲೆಂದೇ ಅವತರಿಸಿ ಬಂದವರಾಗಿದ್ದು, ಅವರಿಂದ ಆಧ್ಯಾತ್ಮಿಕ ಪ್ರವಚನವನ್ನು ಕೇಳುವ ಮೂಲಕ ಭವರೋಗದ ಬಾಧೆಯನ್ನು ಕಡಿಮೆ ಮಾಡಿಕೊಳ್ಳಬಹುದೆಂದು ಶ್ರೀಗಳು ತಿಳಿಸಿದರು.

ಪ್ರತಿ ಧರ್ಮಕ್ಕೂ ತನ್ನದೇ ಆದ ಆಚರಣೆ ಇದೆ. ಇದನ್ನು ಆಯಾ ಧರ್ಮದವರು ಪಾಲಿಸಬೇಕು. ವೀರಶೈವ ಲಿಂಗಾಯತ ಧರ್ಮಕ್ಕೂ ಒಂದು ಆಚರಣೆ ಇದ್ದು, ನೀವೆಲ್ಲ ನಿಮ್ಮ ಧರ್ಮದ ಆಚರಣೆಯನ್ನು ಎಂದಿಗೂ ಕೈಬಿಡದೆ ಮುನ್ನಡೆಸಿಕೊಂಡು ಬಂದರೆ ನಿಮ್ಮ ಮಕ್ಕಳು ಮತ್ತು ಪರಿವಾರ ಅದನ್ನು ಪಾಲಿಸಿಕೊಂಡು ಬರುತ್ತದೆ ಎಂದರು.

ಎಸ್.ಕೆ. ಪಾಟೀಲ ಸ್ವಾಗತಿಸಿದರು. ಈಶ್ವರ ಬೆಟಗೇರಿ ನಿರೂಪಿಸಿದರು. ಡಾ. ಆರ್.ಕೆ. ಗಚ್ಚಿನಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೋಚಲಾಪೂರ, ನರೇಗಲ್ಲ ಮತ್ತು ಸುತ್ತಲಿನ ಗ್ರಾಮಗಳ ಸದ್ಭಕ್ತರು ಪಾಲ್ಗೊಂಡಿದ್ದರು.

# ಕಾಡಾನೆ ದಾಳಿಗೆ 28 ವರ್ಷದ ಯುವಕ ಬಲಿ!

■ ವಿಜಯಸಾಕ್ಷಿ ಸುದ್ದಿ, ಹಾಸನ

ಬೇಲೂರು ತಾಲೂಕಿನ ಬ್ಯಾದನೆ ಗ್ರಾಮದಲ್ಲಿ ಕಾಡಾನೆ ದಾಳಿಗೆ ಯುವಕ ಬಲಿಯಾಗಿರುವಂತಹ ಘಟನೆ ಜರುಗಿದೆ. ಈ ಮೂಲಕ ಜಿಲ್ಲೆಯಲ್ಲಿ ಕಾಡಾನೆ-ಮಾನವನ ನಡುವಿನ ಸಂಘರ್ಷ ಮುಂದುವರೆದಿದೆ. 28 ವರ್ಷದ ಅನಿಲ್ ಮೃತ ಯುವಕ.

ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ

# ಫೆ.26ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಮಹಾಶಿವರಾತ್ರಿ ಜಾತ್ರಾಮಹೋತ್ಸವದ ಅಂಗವಾಗಿ ಫೆ.26ರಿಂದ 28ರವರೆಗೆ ಲೋಕೋತ್ತರ ಶಿವಪೂಜೆ, ವಿಶೇಷ ಶಿವಲಿಂಗ ಪೂಜೆ, ಲಿಂಗದೀಕ್ಷೆ, ರಥೋತ್ಸವ, ಧಾರ್ಮಿಕ ಕಾರ್ಯಕ್ರಮಗಳು, ಧರ್ಮಜಾಗೃತಿ ಸಮಾರಂಭ ಜರುಗಲಿದೆ.

ಈ ಕುರಿತು ಮಾಹಿತಿ ನೀಡಿದ ಮುಕ್ತಿಮಂದಿರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು, ಪ್ರತಿವರ್ಷದಂತೆ ಶ್ರೀ ಕ್ಷೇತ್ರದಲ್ಲಿ ಶಿವರಾತ್ರಿಯ ನಿಮಿತ್ತ ಲೋಕೋತ್ತರ ಶಿವಪೂಜೆಯು ನಡೆಯಲಿದೆ. ತ್ರಿ-ಕೋಟಿ ಶಿವಲಿಂಗ ಸ್ಥಾಪನೆ ಕಾರ್ಯ ಭರದಿಂದ ಸಾಗಿದ ಹಿನ್ನೆಲೆಯಲ್ಲಿ ಮುಕ್ತಿಮಂದಿರದಲ್ಲಿ ಈ ಬಾರಿಯ ಜಾತ್ರಾ ಮಹೋತ್ಸವಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಭಕ್ತ ಸಮೂಹ ಹರಿದು ಬರಲಿದೆ. ಮುಂದಿನ ದಿನಗಳಲ್ಲಿ ಈ ಕ್ಷೇತ್ರ ಭಾರತದ ಯಾತ್ರಾ ಸ್ಥಳಗಳಲ್ಲಿ ಒಂದಾಗಿ ಬೆಳಗಲಿದೆ ಎಂದರು.

ಫೆ.26ರಂದು ಪ್ರಾತಃಕಾಲ ಶ್ರೀ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣ, ಲಿಂ. ವೀರಗಂಗಾಧರ ಜಗದ್ಗುರುಗಳ ಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಬೆಳಿಗ್ಗೆ 9ಕ್ಕೆ ಶಿವದೀಕ್ಷೆ, ಅಯ್ಯಾಚಾರ ಜರುಗುವುದು. ಸಂಜೆ 5ಕ್ಕೆ ಜ. ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿ ನಿಮಿತ್ತ ರಥೋತ್ಸವ ಜರುಗುವುದು. ರಾತ್ರಿ ಮಾನವ ಧರ್ಮ ಮಂಟಪದಲ್ಲಿ ಜ. ರೇಣುಕಾಚಾರ್ಯರು, ಶ್ರೀ ಜಗದ್ಗುರುಗಳವರ ಮಂಗಳ ಮೂರ್ತಿಗೆ ಮಹಾರುದ್ರಾಭಿಷೇಕ, ಪಟ್ಟಾಧ್ಯಕ್ಷರ ಸಡಗರದ ಮಹಾಶಿವಪೂಜೆ, ನಾಮಸ್ಮರಣೆ ಜರುಗಲಿದೆ. ಫೆ.27ಕ್ಕೆ ವಿಶೇಷ ಪೂಜಾ ಕಾರ್ಯಕ್ರಮ. ಸಂಜೆ ಶಿವ-ಪಾರ್ವತಿ ಮಹಾರಥೋತ್ಸವ, ಧರ್ಮಸಭೆ ನಡೆಯಲಿದೆ.

ಸಂಜೆ 4ಕ್ಕೆ ಬಾಳೇಹೊನ್ನೂರ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ದಿವ್ಯಸಾನ್ನಿಧ್ಯ ಮತ್ತು ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ನೇತೃತ್ವದಲ್ಲಿ ಲಿಂ. ರಂಭಾಪುರಿ ವೀರರುದ್ರಮುನಿ ಜಗದ್ಗುರುಗಳ ಜನ್ಮ ಶತಮಾನೋತ್ಸವ ಹಾಗೂ ಧರ್ಮಜಾಗೃತಿ ಸಮಾರಂಭ ಜರುಗಲಿದೆ. ನೊಣವಿನಕೆರೆ, ಸುಳ್ಳ, ಬಂಕಾಪುರ, ಅಬ್ಬಿಗೇರಿ, ಬನ್ನಿಕೊಪ್ಪ, ಎಮ್ಮಿಗನೂರ, ಕಲಾದಗಿ, ಗಿರಿಸಾಗರ ಸೇರಿ ನಾಡಿನ ಹರಗುರು ಚರಮೂರ್ತಿಗಳು, ಮಂತ್ರಿಗಳು, ಶಾಸಕರು, ರಾಜಕಾರಣಿಗಳು,ಗಣ್ಯಮಾನ್ಯರು ಸೇರಿ ಅಪಾರ ಭಕ್ತಸಮೂಹ ಪಾಲ್ಗೊಳ್ಳಲಿದೆ ಎಂದು ಪಟ್ಟಾಧ್ಯಕ್ಷರು ತಿಳಿಸಿದರು.

> ಫೆ.28ರಂದು ಅಮವಾಸ್ಯೆ ವೃತಾಚರಣೆ, ಬೆಳಿಗ್ಗೆ ಶ್ರೀ ರಂಭಾಪುರಿ ಜಗದ್ಗುರುಗಳ ಕತೃ ಗದ್ದುಗೆಗೆ ಮಹಾಪೂಜಾ ಕೈಂಕರ್ಯಗಳು, ಮಧ್ಯಾಹ್ನ 12ಕ್ಕೆ ಸುಲ್ತಾನಪುರ ಗ್ರಾಮಸ್ಥರಿಂದ ವಿಶ್ವಶಕ್ತಿ ಭಾವಚಿತ್ರದ ಮೆರವಣಿಗೆ, 3ಕ್ಕೆ ಲಿಂ. ಜ.ವೀರಗಂಗಾಧರರ ಮಹಾಮಂಗಲ ಮೂರ್ತಿಯ ಅಡ್ಡಪಲ್ಲಕ್ಕಿ ಮಹೋತ್ಸವ, ಕಡುಬಿನ ಕಾಳಗ, ಅನ್ನದ ಹೋಳೆ ಹೊನ್ನಿನ ಮಳೆ ಜರುಗುವುದು. '

## 'ಕಲಿಕೋತ್ಸವ' ಕಲಿಕೆಯ ಸಂಭ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ಬಾಲ ವಿನಾಯಕ ವಿದ್ಯಾನಿಕೇತನದ ಶಾಖೆಯಾದ ಅರ್ಲಿ ಲರ್ನಿಂಗ್ ಸೆಂಟರ್‌ನಲ್ಲಿ 'ಕಲಿಕೋತ್ಸವ-ಕಲಿಕೆಯ ಸಂಭ್ರಮ'ವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾದ ಡಾ. ಅಕ್ಷತಾ ಕವಳಿಕಾಯಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಆತ್ಮವಿಶ್ವಾಸವನ್ನು ಮೂಡಿಸಲು ವೇದಿಕೆಯನ್ನೊದಗಿಸಿದೆ. ವಿದ್ಯಾರ್ಥಿಗಳ ಕ್ರಿಯಾಶೀಲತೆ ಮತ್ತು ಶೈಕ್ಷಣಿಕ ಸಾಮರ್ಥ್ಯವನ್ನು ಎತ್ತಿ ಹಿಡಿದು ಕಲಿಕೋತ್ಸವವು ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಪ್ರೋತ್ಸಾಹದಾಯಕ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದರು. ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳ ಎಲ್ಲಾ ವಿದ್ಯಾರ್ಥಿಗಳು ಆಂಗ್ಲ ಭಾಷೆ, ಕನ್ನಡ, ಗಣಿತ, ಪರಿಸರ ಅಧ್ಯಯನ, ಆಂಗ್ಲ ಮತ್ತು ಕನ್ನಡ ಭಾಷೆಯ ಕುರಿತು ತಂದ ನವೀನ ಯೋಜನೆಗಳು, ಮಾದರಿಗಳು ಮತ್ತು ಚಾರ್ಟ್‌ಗಳನ್ನು ಪ್ರದರ್ಶಿಸುತ್ತಾ ಉತ್ಸಾಹದಿಂದ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಇ.ಎಲ್.ಸಿಯ ಅಧ್ಯಕ್ಷೆ ಮಲ್ಲಿಕಾ ಆರ್., ಶಾಲಾ ನಿರ್ದೇಶಕ ವಿನಾಯಕ್ ಆರ್., ಪ್ರಾಂಶುಪಾಲರಾದ ವಿ.ಎಂ. ಅಡ್ನೂರು, ಉಪ ಪ್ರಾಂಶುಪಾಲರಾದ ಪಿ.ಜಿ. ಬ್ಯಾಳಿ, ಶಿಕ್ಷಕರು, ಪಾಲಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಾರ್ಷಿಕ ಸ್ನೇಹ ಸಮ್ಮೇಳನ ಇಂದು

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡುಮಕ್ಕಳ ಶಾಲೆ ನಂ-1ರಲ್ಲಿ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಮಾಹಾ ಸರಸ್ವತಿ ಪೂಜೆ, ಸಾಯಂಕಾಯ 5 ಗಂಟೆಗೆ 7ನೇ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭ ಹಾಗೂ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ವಿ.ಡಿ. ಸಿದ್ದನಗೌಡರ ವಹಿಸುವರು. ಮುಖ್ಯ ಅತಿಥಿಗಳಾಗಿ ಗದಗ ಡಿಡಿಪಿಐ ಆರ್.ಎಸ್. ಬುರಡಿ, ಪ.ಪಂ ಅಧ್ಯಕ್ಷೆ ಯಲ್ಲವ್ವ ಕವಲೂರ, ಬಿಇಓ ವಿ.ವಿ. ನಡುವಿನಮನಿ, ವಿ.ಎಂ. ಹಿರೇಮಠ, ಎಸ್.ಆರ್. ಬಂಡಿ, ಪ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಂ. ಶೇಖ, ಎಸ್.ಸಿ. ಬಡ್ನಿ, ಕೆ.ಎಲ್. ಕರಿಗೌಡರ, ವಿಜಯ ನೀಲಗುಂದ, ರಾಮಣ್ಣಾ ಕಮಾಜಿ, ಶಿವಾನಂದ ದಳವೆ, ಸಂಜಯ ನೀಲಗುಂದ, ಚಂದ್ರು ತೆಂಬದಮನಿ, ಈಶ್ವರ ಕಲ್ಯಾಣಮಠ, ಪ್ರಲ್ಹಾದ ಯಾವಗಲ್ಲ, ಬಿ.ಜಿ. ಯಳವತ್ತಿ, ಮಂಜುನಾಥ ಮಟ್ಟಿ ಎಸ್.ಸಿ. ಅಮರಶೆಟ್ರ ಭಾಗವಹಿಸುವರು ಎಂದು ಶಾಲಾ ಪ್ರಧಾನ ಗುರು ಪಿ.ಬಿ. ಕೆಂಚನಗೌಡ, ಪ್ರಕಟಣೆಗೆ ತಿಳಿಸಿದ್ದಾರೆ.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

# ಹರ್ಡೇಕರ ಮಂಜಪ್ಪನವರ ಬದುಕು ಅನುಕರಣೀಯ

■ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರ ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಸಮಾಜದಲ್ಲಿ ಮೌಲ್ಯಗಳನ್ನು ಬೆಳೆಸುವಲ್ಲಿ, ಬಿತ್ತುವಲ್ಲಿ ತಮ್ಮ ಬದುಕನ್ನು ಮುಡಿಪಾಗಿಟ್ಟರು. ಹರ್ಡೇಕರ ಮಂಜಪ್ಪನವರ ಬದುಕು ಮತ್ತು ಜೀವನಾದರ್ಶಗಳು ಅನುಕರಣೀಯ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ನುಡಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2733ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡುತ್ತಿದ್ದರು.

ಜನರಿಗೆ ಒಳ್ಳೆಯದನ್ನು ಕೊಡುವುದೇ ಶಿವಾನುಭವ. ನಡೆ-ನುಡಿಗಳನ್ನು ಪರಿಶುದ್ಧವಾಗಿಟ್ಟುಕೊಂಡಾಗ ಮನಸ್ಸು ಒಳ್ಳೆಯದನ್ನು ಯೋಚಿಸುತ್ತದೆ. ಬೆಳಗಾವಿಯ ಕಾಂಗ್ರೆಸ್ ಸಭೆಯಲ್ಲಿ ಮೊಟ್ಟ ಮೊದಲು ಬಸವಣ್ಣನವರ ವಚನಗಳನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ ಗಾಂಧೀಜಿಯವರಿಗೆ ಕೊಡುವ ಮೂಲಕ ಪರಿಚಯಿಸಿದರು. ಮಂಜಪ್ಪನವರು ಗಾಂಧೀಜಿಯವರ ಪ್ರತಿರೂಪ. ಸಮಾಜ ಸೇವೆಗಾಗಿ ಮದುವೆಯಾಗದೇ ಬದುಕಿದರು. ಅಂಗಗುಣಗಳನ್ನು ತ್ಯಾಗ ಮಾಡಿ, ಲಿಂಗಗುಣ ಹೊಂದಿ ನಿಜವಾದ ಶರಣರಾಗಿ ಧರ್ಮ ಪಾಲನೆ ಮಾಡಿದರು ಎಂದು ಶ್ರೀಗಳು ತಿಳಿಸಿದರು.

ಉಪನ್ಯಾಸಕರಾಗಿ ಆಗಮಿಸಿದ ವಿಜಯಪುರದ



ನಿವೃತ್ತ ಪ್ರಾಚಾರ್ಯರಾದ ಗಾನಕೋಗಿಲೆ ಶ್ರೀ ಬಸವರಾಜ ಕೆಂಧೂಳಿ ಮಾತನಾಡಿ, ಸಾರ್ಥಕ ಜೀವನದ ಸೂತ್ರಗಳು ಬಗ್ಗೆ ಮಾತನಾಡುತ್ತಾ ಹಲವಾರು ಬಸವಣ್ಣನವರ ವಚನಗಳನ್ನು ಸುಶ್ರಾವ್ಯವಾಗಿ ಹಾಡಿ, ಜೀವನದ ಸಪ್ತ ಸೂತ್ರಗಳು ಹೇಗೆ ವಚನಗಳಲ್ಲಿ ಅಡಕವಾಗಿವೆ ಎಂದು ತಿಳಿಸಿದರು. ಸಮಾಜದಲ್ಲಿ ಜಾಗೃತಿ ಮೂಡಿಸುವ ಹಲವಾರು ಗೀತೆಗಳನ್ನು ಹಾಡಿದರು.

ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ್ ಸುತಾರ ವಚನ ಸಂಗೀತ ಸೇವೆ ನೇರವೇರಿಸಿದರು. ಧರ್ಮಗ್ರಂಥ ಪಠಣವನ್ನು ವರ್ಷಾ ಆರ್.ಮಳಜಿ ಹಾಗೂ ವಚನ ಚಿಂತನವನ್ನು ಸಾನ್ವಿ ಆರ್.ಪಾಟೀಲ ಮಾಡಿದರು.

ದಾಸೋಹ ಸೇವೆಯನ್ನು ಶಾಂತಾದೇವಿ ಅಂದಾನಪ್ಪ ಗೌಡರ, ಕುಟುಂಬ ವರ್ಗದವರು ಮತ್ತು ಎಚ್. ವನಜಾಕ್ಷಿ ಹಾಗೂ ಎಚ್. ಮಹೇಂದ್ರ ಬೆಂಗಳೂರು, ಶಿರೋಳ ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವ ಸಮಿತಿ-2025ರ ಅಧ್ಯಕ್ಷರಾದ ಶಿವಾನಂದ ಯಲಬಳ್ಳಿ, ಉಪಾಧ್ಯಕ್ಷ ಶ್ರೀಧರ ಶಿಪ್ರಿ, ಕಾರ್ಯದರ್ಶಿ ಬಸವರಾಜ ಕುರಿ, ಸಹ ಕಾರ್ಯದರ್ಶಿ ಪರಶುರಾಮ ಮಡಿವಾಳರ ವಹಿಸಿದ್ದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಬಾಲಚಂದ್ರ ಭರಮಗೌಡ್ರ, ಉಪಾಧ್ಯಕ್ಷ ಡಾ. ಉಮೇಶ ಪುರದ, ವಿದ್ಯಾ ಪ್ರಭು ಗಂಜಿಹಾಳ, ಕಾರ್ಯದರ್ಶಿ ವೀರಣ್ಣ ಗೋಟಡಕಿ, ಸಹಕಾರ್ಯದರ್ಶಿ ಸೋಮನಾಥ ಪುರಾಣಿಕ, ನಾಗರಾಜ್ ಹಿರೇಮಠ, ಸಂಘಟನಾ ಕಾರ್ಯದರ್ಶಿ ಮಹೇಶ್ ಗಾಣಿಗೇರ, ಕೋಶಾಧ್ಯಕ್ಷ ಬಸವರಾಜ ಕಾಡಪ್ಪನವರ, ಶಿವಾನುಭವ ಸಮಿತಿಯ ಸಹಚೇರ್ಮನ್ ಶಿವಾನಂದ ಹೊಂಬಳ ಹಾಗೂ ಶ್ರೀಮಠದ ಭಕ್ತರು ಉಪಸ್ಥಿತರಿದ್ದರು.

ವಿದ್ಯಾ ಗಂಜಿಹಾಳ ಸ್ವಾಗತಿಸಿದರು. ಶಿವಾನುಭವ ಸಮಿತಿಯ ಚೇರಮನ್ ಐ.ಬಿ. ಬೆನಕೊಪ್ಪ ಪರಿಚಯಿಸಿದರು. ಅಶೋಕ್ ಹಾದಿ ಹಾಗೂ ಡಾ. ಉಮೇಶ ಪುರದ ಕಾರ್ಯಕ್ರಮ ನಿರೂಪಿಸಿದರು.

ಸಮ್ಮುಖ ವಹಿಸಿದ್ದ ಭೈರನಟ್ಟಿ ಶಿರೋಳದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ಮಾತನಾಡಿ, ಹರ್ಡೇಕರ ಮಂಜಪ್ಪನವರು ಬನವಾಸಿಯಲ್ಲಿ ಜನಿಸಿ, ಅಲ್ಲಿಯೇ ಶಾಲೆ ಕಲಿತು, ಕಲಿತ ಶಾಲೆಯಲ್ಲಿಯೇ ಶಿಕ್ಷಕರಾಗಿ ಸಮಾಜದ ಏಳ್ಗೆಗಾಗಿ ಅವಿರತ ಶ್ರಮಿಸಿದರು. ಹರ್ಡೇಕರ ಮಂಜಪ್ಪನವರು ಕೊಟ್ಟ ಬಸವಣ್ಣನವರ ಇಂಗ್ಲಿಷ್‌ನಲ್ಲಿಯ ವಚನಗಳನ್ನು ಗಾಂಧೀಜಿಯವರು ನೋಡಿ, ಎಂಟುನೂರು ವರ್ಷಗಳ ಹಿಂದೆ ಅದ್ಭುತವಾದ ಕೆಲಸವನ್ನು ಮಾಡಿದ್ದನ್ನು ನೋಡಿ, ಬಸವಣ್ಣನವರು ಈಗ ಇದ್ದಿದ್ದರೆ ನಾನು ಅವರ ಕಾರ್ಯಕ್ಕೆ ಹೆಗಲು ಕೊಡುತ್ತಿದ್ದೆ ಎಂದಿದ್ದರಂತೆ. ಫ.ಗು. ಹಳಕಟ್ಟಿಯವರು, ಡೆಪ್ಯುಟಿ ಚನ್ನಬಸಪ್ಪನವರು, ಹರ್ಡೇಕರ್ ಮಂಜಪ್ಪನವರು ಲಿಂಗಾಯತ ಧರ್ಮಕ್ಕೆ ಮೇರು ವ್ಯಕ್ತಿತ್ವ ತಂದುಕೊಟ್ಟವರು ಎಂದು ಹೇಳಿದರು.

# ವಿದ್ಯಾರ್ಥಿಗಳು ಪಾಲಕರ ಶ್ರಮವನ್ನು ಅರ್ಥ ಮಾಡಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಿಮ್ಮನ್ನು ಹೊತ್ತು-ಹೆತ್ತು, ಸಾಕಿ ಬೆಳೆಸುವಲ್ಲಿ ನಿಮ್ಮ ಪಾಲಕರ ಶ್ರಮ ಬಹಳಷ್ಟಿದೆ. ನೀವು ಬೇಡಿದ್ದನ್ನು ನೀಡಿ ನಿಮ್ಮನ್ನು ಒಬ್ಬ ವ್ಯಕ್ತಿಯನ್ನಾಗಿ ರೂಪಿಸುವಲ್ಲಿ ತಂದೆ-ತಾಯಿಗಳ ಪಾತ್ರ ದೊಡ್ಡದು. ಆದ್ದರಿಂದ ನೀವು ಅವರ ಶ್ರಮವನ್ನು ಅರ್ಥ ಮಾಡಿಕೊಂಡು ನಿಮ್ಮ ಉತ್ತಮ ವಿದ್ಯಾಭ್ಯಾಸ ಮತ್ತು ಸನ್ನಡತೆಯೊಂದಿಗೆ ಅವರ ಋಣವನ್ನು ಕಿಂಚಿತ್ತಾದರೂ ತೀರಿಸಲು ಪ್ರಯತ್ನಿಸಬೇಕೆಂದು ಡಯಟ್‌ನ ಉಪನ್ಯಾಸಕ ಕೆ.ಪಿ.



ಸಾಲಿಮಠ ಹೇಳಿದರು.

ಪಟ್ಟಣದ ದೇವರಾಜ್ ಅರಸ್ ಮೆಟ್ರಿಕ್‌ಪೂರ್ವ ಬಾಲಕರ ವಸತಿ ನಿಲಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ವಸತಿ ನಿಲಯದ ವಿದ್ಯಾರ್ಥಿಗಳಿಗಾಗಿ ನಡೆಯುವ ವಿಶೇಷ ತರಗತಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಾಲಕರು ನಿಮ್ಮ ಭವಿಷ್ಯದ ಬಗ್ಗೆ ವಿಶೇಷ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಅವರ ಕನಸುಗಳನ್ನು ನೀವು ನನಸು ಮಡಬೇಕೇ ಹೊರತು, ಅವುಗಳನ್ನು ಕಮರಲು ಬಿಡಬಾರದು. ಅದಕ್ಕಿರುವ ಒಂದೇ ಮಾರ್ಗವೆಂದರೆ ಅದು ನಿಮ್ಮ ವಿದ್ಯಾಭ್ಯಾಸ. ನಿಮ್ಮ ವಿದ್ಯಾಭ್ಯಾಸದ ಮೂಲಕ ನೀವು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲೆಂದೇ ಇಲ್ಲಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಿರಿ ಎಂದರು.

ಎಸ್‌ಆರ್‌ಕೆ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಬಿ. ನಿಡಗುಂದಿ ಮಾತನಾಡಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖವಾದ ಘಟ್ಟ. ಇದನ್ನು ನೀವು ಯಶಸ್ವಿಯಾಗಿ ದಾಟಿ-ದರೆ ಮುಂದಿನ ನಿಮ್ಮ ಭವಿಷ್ಯ ಸುಂದರವಾಗಿರುತ್ತದೆ. ಪರೀಕ್ಷೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿದ್ದು, ಅಧೈರ್ಯಗೊಳ್ಳದೆ ಪೂರ್ಣ ವಿಶ್ವಾಸದಿಂದ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾಗಿರಿ ಎಂದರು.

ಪಟ್ಟಣದ ವಿವಿಧ ಶಾಲೆಗಳ ಮುಖ್ಯ ಶಿಕ್ಷಕರಾದ ಬಿ.ಎಂ. ಸಜ್ಜನ, ಎಚ್.ಕೆ. ಕುರ್ಲಗೇರಿ, ಪಿ.ಎನ್. ಹಿರೇಮಠ ಅವರು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳ ಕುರಿತು ಮಾರ್ಗದರ್ಶನ ಮಾಡಿದರು. ಎಂ.ವೈ. ಕಿತ್ತಲಿ, ರವಿ ಕೊಪ್ಪದ, ವಸತಿ ನಿಲಯದ ಮುಖ್ಯಸ್ಥರು ಉಪಸ್ಥಿತರಿದ್ದರು.

### 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಡಾ. ಕಲ್ಲಯ್ಯ ಹಿರೇಮಠ

# ಚಿಕ್ಕಂದಿನಲ್ಲೇ ಮಕ್ಕಳಿಗೆ ಸಂಸ್ಕಾರ ಕಲಿಸಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಸಂಸ್ಕಾರ ಕಲಿಸಿ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬ ನುಡಿಯನ್ನು ಕೇಳಿದ್ದೀರಿ. ಆದ್ದರಿಂದ ನಿಮ್ಮ ಮಕ್ಕಳು ಉತ್ತಮ ನಾಗರಿಕರಾಗಬೇಕಾದರೆ ಅವರಿಗೆ ಈಗಿನಿಂದಲೇ ಸಂಸ್ಕಾರ ಕಲಿಸಿ ಎಂದು ಪ್ರಾಧ್ಯಾಪಕ ಡಾ. ಕಲ್ಲಯ್ಯ ಹಿರೇಮಠ ಹೇಳಿದರು.

ಪಟ್ಟಣದ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನೆಯೇ ಮೊದಲ ಪಾಠಶಾಲೆಯಾಗಬೇಕು. ಮನೆಯಲ್ಲಿನ ಹಿರಿಯರೆಲ್ಲರೂ ತಮ್ಮ ಉತ್ತಮ ನಡೆ-ನುಡಿಗಳಿಮದ ಮಕ್ಕಳ ಮೇಲೆ ಉತ್ತಮ ಸಂಸ್ಕಾರದ ಪಾಠವನ್ನು ಹಾಕಬೇಕು. ಅವರು ತಪ್ಪು ಮಾಡಿದಾಗ ಅವರನ್ನು ಶಿಕ್ಷಿಸಿ, ತಿದ್ದಿ ಹೇಳಿ. ಇಲ್ಲವಾದರೆ ನಿಮ್ಮ ಮಕ್ಕಳು



ನಿಮ್ಮಿಂದ ಶಾಶ್ವತವಾಗಿ ದೂರವಾಗುತ್ತಾರೆ ಎಂದು ಡಾ. ಕಲ್ಲಯ್ಯ ಹೇಳಿದರು.

ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ರುದ್ರಪ್ಪ ಹುರಳಿ ಮಾತನಾಡಿ, ಪಾಲಕರು ಮಕ್ಕಳ ಅಂಕಗಳಿಗಷ್ಟೇ ಗಮನ ಕೊಡುತ್ತಿದ್ದೀರಿ. ಇದರ ಬದಲಾಗಿ ಅವರ ಸರ್ವಾಂಗೀಣ ಅಭಿವೃದ್ಧಿಯ ಕಡೆಗೆ ಗಮನ ನೀಡಿದಾಗ ಮಾತ್ರ ಮಕ್ಕಳ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ. ಅಂಕಗಳು ಬೇಡವೆಂದಲ್ಲ, ಶೈಕ್ಷಣಿಕ ಪ್ರಗತಿಗೆ ಅಂಕಗಳು ಬೇಕೇಬೇಕು. ಅದರ ಜೊತೆಗೆ ಮಕ್ಕಳನ್ನು ಈ ದೇಶದ ಉತ್ತಮ ನಾಗರಿಕರನ್ನಾಗಿಸುವತ್ತ ನಿಮ್ಮ ವಿಚಾರವೂ ಇರಬೇಕೆಂದರು.

ವೇದಿಕೆಯ ಮೇಲೆ ಪ.ಪಂ ಅಧ್ಯಕ್ಷ ಫಕೀರಪ್ಪ ಮಳ್ಳಿ, ಸಂಸ್ಥೆಯ ಉಪಾಧ್ಯಕ್ಷ ಎಸ್.ಕೆ. ಪಾಟೀಲ, ಕಾರ್ಯದರ್ಶಿ ಈಶ್ವರ ಬೆಟಗೇರಿ, ಸದಸ್ಯರಾದ ಡಾ. ಆರ್.ಕೆ. ಗಚ್ಚಿನಮಠ, ನಿವೃತ್ತ ಶಿಕ್ಷಕ ಎಂ.ಎ. ಹಿರೆವಡೆಯರ, ಶಿಕ್ಷಕ ಎಂ.ಕೆ. ಬೇವಿನಕಟ್ಟಿ, ಮುಖ್ಯ ಶಿಕ್ಷಕಿ ನಿರ್ಮಲಾ ಹಿರೇಮಠ ಇದ್ದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಆಶೀರ್ವಚನ ನೀಡಿ ನಿಮ್ಮ ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣ ಕಲಿಯಲೆಂದು ಈ ಶಾಲೆಯನ್ನು ಪ್ರಾರಂಭಿಸಲಾಗಿದೆ. ಇಂದಿನ ಅತಿಥಿಗಳು ಹೇಳಿದ ಮಾತುಗಳು ತುಂಬಾ ಮನನೀಯವಾಗಿದ್ದು, ಮೊದಲು ಅವುಗಳನ್ನು ಪಾಲಕರು ತಿಳಿದುಕೊಂಡು ನಂತರ ಮಕ್ಕಳಿಗೆ ಅರ್ಥ ಮಾಡಿಸಲು ಪ್ರಯತ್ನಿಸಬೇಕು. ಕೇವಲ ಮನರಂಜನೆಯೊಂದೇ ಜೀವನದ ಸಾಧನೆಯಾಗಬಾರದು. ಮನರಂಜನೆಯೊಂದಿಗೆ ವಿದ್ಯಾಭ್ಯಾಸ, ಅವರ ವ್ಯಕ್ತಿತ್ವದ ಕಡೆಗೂ ಪಾಲಕರು ಗಮನ ನೀಡಬೇಕು ಎಂದು ತಿಳಿಸಿದರು.

## ಪಿಯುಸಿ ಪರೀಕ್ಷೆ: ಪ್ರತಿಬಂಧಕಾಜ್ಞೆ ಜಾರಿ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2025 ರ ಮಾರ್ಚ್ ತಿಂಗಳಲ್ಲಿ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯನ್ನು ಮಾರ್ಚ್ 1 ರಿಂದ 20 ರವರೆಗೆ ಬೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಸಲಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಸದರ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ. ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾರ್ಚ್ 1 ರಿಂದ 20 ರವರೆಗೆ ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು-ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್ ಸ್ಟಾಲ್, ಫೋ-ಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರ ಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದ್ದು ಉಳಿದ ಎಲ್ಲ ಪರೀಕ್ಷಾ ಸಿಬ್ಬಂದಿ / ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣಗಳನ್ನು ತರುವುದುನ್ನು / ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರತಿಬಂಧಿಸಿದ ಯಾವುದೇ ವಸ್ತುಗಳನ್ನು ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದಡಿ ತೆಗೆದುಕೊಂಡು ಹೋಗಲು ನಿರ್ಬಂಧಿಸಿದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

### ವಾಣಿಜ್ಯಶಾಸ್ತ್ರ ವಿಭಾಗದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಕಾಶ ಹೊಸಮನಿ

# ವಿದ್ಯಾರ್ಥಿಗಳು ಸಮಾಜಕ್ಕೆ ತಮ್ಮ ಕೊಡುಗೆ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಂಡು ಅದನ್ನು ಸಾಕಾರಗೊಳಿಸುವಲ್ಲಿ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಳ್ಳಿ. ತಮ್ಮನ್ನು ತಾವು ಅವಲೋಕಿಸಿಕೊಂಡು ಜೀವನದಲ್ಲಿ ಒಳ್ಳೆಯವರಾಗಿ ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಿ ಭಾರತದ ಸತ್ಪ್ರಜೆಯಾಗಬೇಕು ಎಂದು ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರಕಾಶ ಹೊಸಮನಿ ಹೇಳಿದರು.

ನಗರದ ಹಳೆಯ ನ್ಯಾಯಾಲಯ ಕಟ್ಟಡದಲ್ಲಿರುವ ಪ್ರತಿಷ್ಠಿತ ಮಹಿಳಾ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟದ ಭರವಸೆಯ ಕೋಶ(ಐಕ್ಯೂಎಸಿ) ಅಡಿ ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿನಿಯರಿಗೆ ಶಿಕ್ಷಣದ ಗುರಿ ಮತ್ತು ದಾರಿಯ ಬಗ್ಗೆ ಸದಾ ಚಿಂತನೆಗಳಿರಬೇಕು. ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಯುವ ಮಾನವ ಸಂಪನ್ಮೂಲ ಹೇರಳವಾಗಿದ್ದು, ದೇಶದ



ಅನೇಕ ಯುವಕರು ರಾಷ್ಟ್ರದ ಹಿತಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳು ಗುರುಗಳಿಗೆ ಗೌರವ ನೀಡಿ ಅವರ ಮಾರ್ಗದರ್ಶನದಲ್ಲಿ ನಡೆದರೆ ವೈಯಕ್ತಿಕವಾಗಿ ಬೆಳವಣಿಗೆ ಕಾಣುವುದರ ಜತೆ ಓದಿದ ಕಾಲೇಜಿಗೆ ಕೀರ್ತಿ ತಂದು ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ. ಪ್ರಕಾಶ ದೇಶಪಾಂಡೆ, ನಿವೃತ್ತ ಪ್ರಾಚಾರ್ಯ ಬಿ.ಎ. ಹಿರೇಮಠ, ಎಚ್‌ಸಿಇಸಿ ಉಪನ್ಯಾಸಕ ಎಸ್.ಎನ್. ಸಾಗೋಟಿ ವಿಶೇಷ ಉಪನ್ಯಾಸ ನೀಡಿದರು.

ಕಾಲೇಜು ಪ್ರಾಂಶುಪಾಲರಾದ ಎಮ್.ಯು. ಹಿರೇಮಠ ಮಾತನಾಡಿ, ವಾಣಿಜ್ಯ ಶಾಸ್ತ್ರ ವಿಭಾಗದ ಮೂಲಕ ವಿಶೇಷ ಉಪನ್ಯಾಸ ನೀಡುತ್ತಿದ್ದು, ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ಎಫ್.ಎಸ್. ಕರಬುಡ್ಡಿ, ಐಕ್ಯೂಎಸಿ ಸಂಯೋಜಕರು ಪ್ರೊ. ಸತ್ತಾರ ಬಡೇಖಾನ್ನವರ, ಪ್ರೊ. ಪ್ರಕಾಶ ಕರಿಗಾರ, ಪ್ರೊ. ಎಸ್.ಯು. ಸಜ್ಜನಶೆಟ್ಟರ, ಡಾ. ಎಸ್.ಕೆ. ಪೂಜಾರ, ಪ್ರೊ. ಮಹಾಲಕ್ಷ್ಮೀ ಹುಟಗಿ, ಪ್ರೊ. ರೂಪಾ ಶ್ರೀನಿವಾಸ, ಪ್ರೊ. ಮಹಬೂಬಆರೀಫ ಸದರಸೋಪವಾಲೆ, ಪ್ರೊ. ಸತೀಶ ಸರ್ವಿ, ಪ್ರೊ. ಕೃಷ್ಣಪ್ಪ ಬೆಂತೂರ, ಡಾ. ಸುಜಾತಾ ಬರದೂರ, ಪ್ರೊ. ಶ್ರೀದೇವಿ ದಾಸರ, ಪ್ರೊ. ರಿಯಾಜಅಹ್ಮದ ದೊಡ್ಡಮನಿ, ಪ್ರೊ. ಪ್ರತಿಭಾ ಚವ್ಹಾಣ, ಪ್ರೊ. ಸುಮಿತ್ರಾ ಮೇದಾರ, ಪ್ರೊ. ವಹಿದಾ ಕಿಲ್ಲೆದಾರ, ಲಕ್ಷ್ಮೀ ನಾಗರಾಳ, ಶ್ರೀದೇವಿ ಸೇರಿದಂತೆ ವಿದ್ಯಾರ್ಥಿನಿಯರು ಇದ್ದರು.

## ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಎರಡು ಬಿ.ಇಡಿ ಕೋರ್ಸಿನ ದಾಖಲಾತಿ ಪ್ರವೇಶ ಪ್ರಕ್ರಿಯೆಯ 6ನೇ ಸುತ್ತಿಗೆ ಕಾಲೇಜುಗಳ ಆಯ್ಕೆಗಾಗಿ ಆಪ್ಷನ್ ಎಂಟ್ರಿಗೆ ದಿ:20-02-2025 ರಿಂದ ದಿ:23-02-2025 ವರೆಗೆ ಅವಕಾಶ ನೀಡಿದ್ದು. 6ನೇ ಸುತ್ತಿನ ಸೀಟು ಹಂಚಿಕೆಯನ್ನು ದಿನಾಂಕ:25-02-2025 ರಂದು ಪ್ರಕಟಣೆ ಮಾಡಲಾಗುವುದು.

ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಚಲನ್ ಡೌನಲೋಡ್ ಮಾಡಿಕೊಂಡು ನಿಗದಿತ ದಾಖಲಾತಿ ಶುಲ್ಕವನ್ನು ದಿನಾಂಕ:01-03-2025 ರೊಳಗೆ ಋಃಋ ಬ್ಯಾಂಕಿನಲ್ಲಿ ಪಾವತಿಸಿ ಅಭ್ಯರ್ಥಿಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಳಸಾಪುರ ರೋಡ್ ಗದಗ ಇಲ್ಲಿ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಝರಾಕ್ಸ್ ಪ್ರತಿಯೊಂದಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ಜಾಲತಾಣವನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಜಿ ಎಂ ಮುಂದಿನಮನಿ, ನೋಡಲ್ ಅಧಿಕಾರಿಗಳು ಡಯಟ್ ಗದಗ ಮೊಬೈಲ್ ಸಂ. 7619277145

## ಮನಸೆಳೆದ ಭರತನಾಟ್ಯ, ಕಥಕ್ ಪ್ರದರ್ಶನ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಪುಲಿಗೆರೆ ಉತ್ಸವದ ಕೊನೆಯ ದಿನವಾದ ಭಾನುವಾರ ಸಂಜೆ ಬೆಂಗಳೂರಿನ ರೋಹಿಣಿ ಮತ್ತು ಮೇಧಾ ಅವರ ಭರತನಾಟ್ಯ ಮತ್ತು ಕಥಕ್ ಸಂಪೂರ್ಣ ಕಾರ್ಯಕ್ರಮದ ಹೈಲೆಟ್ಸ್ ಎನಿಸಿಕೊಂಡಿತು.

ಕಥಕ್ ಮತ್ತು ಭಾರತನಾಟ್ಯದ ವೈಭವವನ್ನು ಒಗ್ಗೂಡಿಸುವ ಮನೋಹರ ನೃತ್ಯ ರಚನೆಯನ್ನು ಇಬ್ಬರು ನುರಿತ ಕಲಾವಿದೆಯರು ಸುಮಾರು ಒಂದುವರೆ ಗಂಟೆಗೂ ಅಧಿಕ ಸಮಯ ಪ್ರಸ್ತುತಪಡಿಸಿದ್ದು ಎಲ್ಲ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವಂತಿತ್ತು.

ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗುರುಗಳು ಸ್ಮತಿ ನಿರೂಪಮಾ ರಾಜೇಂದ್ರ ಮತ್ತು ಟಿ.ಡಿ. ರಾಜೇಂದ್ರ ಅವರ ಶಿಷ್ಯರಾಗಿ ತಮ್ಮದೇ ಆದ ಹೆಸರು ಗಳಿಸಿರುವ ಅಂತಾರಾಷ್ಟ್ರೀಯ ಮಟ್ಟದ ಕಲಾವಿದೆಯರಾದ ರೋಹಿಣಿ ಪ್ರಭಾತ್ (ಕಥಕ್) ಮತ್ತು ಮೆಧಾವಿನಿ ವರಖೇಡಿ (ಭಾರತನಾಟ್ಯಂ) ನೃತ್ಯ ಪ್ರದರ್ಶಿಸಿದರು.

ಪ್ರವೀಣ್ ಡಿ.ರಾವ್, ಪ್ರವೀಣ್ ಗೋಡ್ಕಿಂಡಿ ಅವರ ಸಂಗೀತದಲ್ಲಿ ವಂದೇ ಹರಿಹರೌ-ಶಿವ-ನಾರಾಯಣರ ತತ್ವಾತ್ಮಕ ಏಕತೆಯನ್ನು ಹೊಳಪಿಸುವ ಮಂಗಳಾಚರಣ ಪ್ರದರ್ಶಿಸಿದರು. ನಂತರ ತರಳ ರನ್ನೆ-ಲಕ್ಷ್ಮಿ-ಪಾರ್ವತಿಯ ಹಾಸ್ಯಭರಿತ ಸಂಭಾಷಣೆಯ ಮೂಲಕ ಶಿವ-ವಿಷ್ಣು ಮಹಿಮೆಯನ್ನು ವ್ಯಕ್ತಪಡಿಸುವ ನೃತ್ಯವನ್ನು ಅತ್ಯಂತ ಮನಮೋಹಕವಾಗಿ ಅಭಿನಯಿಸಿ ಜನರಿಗೆ ಕಥೆ ಅರ್ಥವಾಗುವಂತೆ ಪ್ರಸ್ತುತಪಡಿಸಿದರು.

ಒಬ್ಬಳು ಬಾಲಕೃಷ್ಣನೊಂದಿಗೆ ವಾತ್ಸಲ್ಯಭಾವ, ಇನ್ನೊಬ್ಬಳು ಶೃಂಗಾರ ಭಾವದಲ್ಲಿ ಕೃಷ್ಣನನ್ನು ಆಕರ್ಷಿಸಿಸುವ ಕೃಷ್ಣ ನೀ ಬೇಗನೆ ಬಾರೋ ನೃತ್ಯ, ಜುಗಲ್ಬಂದಿ ತಿಲ್ಲಾನಾ-ತರಾನಾ ಕಥಕ್ ಮತ್ತು ಭಾರತನಾಟ್ಯದ ತಾಂತ್ರಿಕತೆಯನ್ನು ಒಗ್ಗೂಡಿಸಿ, ಶ್ರೀರಾಮನ ಭಕ್ತಿಯ ಶ್ಲೋಕಗಳ ಮೂಲಕ ಪರಮತತ್ವವನ್ನು ಪ್ರಕಟಿಸುವ ಮನೋಹರ ಸನ್ನಿವೇಶ, ಅಂತಿಮದಲ್ಲಿ ತಾನಿ ಅವರ್ತನಂ ಮೂಲಕ ಮುಕ್ತಾಯಗೊಂಡಾಗ ಇಡಿ ಸಭಾಂಗಣವೇ ಎದ್ದು ನಿಂತು ಕಲಾವಿದರ ಕಲೆಗೆ ಚಪ್ಪಾಳೆಯ ಮೂಲಕ ಮೆಚ್ಚುಗೆ ಸೂಚಿಸಿದರು.

### ಡಾ. ತೋಂಟದ ಸಿದ್ಧಲಿಂಗ ಶ್ರೀ, ಸದಾನಂದ ಪಿಳ್ಳಿ ಸ್ಮರಣಾರ್ಥ ದತ್ತಿ ಉಪನ್ಯಾಸ


## ಕರುನಾಡಿಗಾಗಿ ತೋಂಟದ ಶ್ರೀಗಳ ಕೊಡುಗೆ ಅಪಾರ

■ವಿಜಯಸಾಕ್ಷಿ ಸುದ್ದಿ, ಗದಗ

ತೋಂಟದ ಸಿದ್ಧಲಿಂಗ ಶ್ರೀಗಳು ಗೋಕಾಕ ಚಳವಳಿಗೆ ಸಿಂದಗಿಯಲ್ಲಿ ಮುನ್ನುಡಿ ಬರೆಯುವ ಮೂಲಕ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸುವ ಕೈಂಕರ್ಯಕ್ಕೆ ಮುನ್ನುಡಿ ಇಟ್ಟರು. ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ ಪುಸ್ತಕ ಪ್ರಕಟನೆಯನ್ನು ಪ್ರಾರಂಭಿಸಿ ಮರೆತು ಹೋಗಬಹುದಾದ ಮಹನೀಯರನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವನ್ನು ಮಾಡಿ ಸಾಹಿತ್ಯ ಸಂವರ್ಧನೆಗೆ ವಿಶೇಷ ಕೊಡುಗೆ ನೀಡಿದ್ದಾರೆ. ಶಿವಾನುಭವ ವೇದಿಕೆ ಮೂಲಕ ಕನ್ನಡವನ್ನು ಕಟ್ಟುವ ಕಾರ್ಯವನ್ನು ಪೂಜೆಯ ರೂಪದಲ್ಲಿ ನೇರವೇರಿಸಿದ್ದಾರೆ. ಅವರು ಕನ್ನಡಕ್ಕಾಗಿ ಬದುಕಿದವರು ಎಂದು ತೋಂಟ-ದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್. ಎಸ್. ಪಟ್ಟಣಶೆಟ್ಟರ ತಿಳಿಸಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಡಾ.ತೋಂಟದ ಸಿದ್ಧಲಿಂಗಶ್ರೀಗಳ ಹಾಗೂ ಸದಾನಂದ ಪಿಳ್ಳಿ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕನ್ನಡಕ್ಕೆ ಡಾ. ತೋಂಟದ ಸಿದ್ಧಲಿಂಗಶ್ರೀಗಳ ಕೊಡುಗೆ ಕುರಿತಾಗಿ ಮಾತನಾಡಿದರು.

ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ 600ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ ಮಠವನ್ನು ಜ್ಞಾನ ದಾಸೋಹದ ಕೇಂದ್ರವನ್ನಾಗಿದರು. ಲೇಖಕರನ್ನು, ಸಂಶೋಧಕರನ್ನು ಪ್ರೋತ್ಸಾಹಿಸಿದರು. ಈ ಕಾರ್ಯದಿಂದಲೇ ಅವರನ್ನು ಪುಸ್ತಕ ಸ್ವಾಮೀಜಿ, ಕನ್ನಡ ಜಗದ್ಗುರು ಎಂದು ಜಗದ ಜನ ವ್ಯಾಖ್ಯಾನಿಸಿದ್ದಾರೆಂದು ತಿಳಿಸಿದರು.



ಡಾ. ದತ್ತಪ್ರಸನ್ನ ಪಾಟೀಲ ಮಾತನಾಡಿ, ಸದಾನಂದ ಪಿಳ್ಳಿ ಅವರು ಜನಸೇವೆಗೆ ಅರ್ಪಿಸಿಕೊಂಡ ಅಪರೂಪದ ರಾಜಕಾರಣಿಯಾಗಿದ್ದರು. ನಗರಸಭೆಯ ವಿರೋಧ ಪಕ್ಷದ ನಾಯಕರಾಗಿ ಸಮಸ್ಯೆಗಳಿಗೆ ಸ್ಪಂದಿಸಿ ನಗರದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸಮಾಜಮುಖಿ, ಜನಪರ ಕಾಳಜಿಯ ಸದಾನಂದ ಅವರು ತಮ್ಮ ಸೇವೆಯ ಮೂಲಕ ಅಜರಾಮರರಾಗಿದ್ದಾರೆಂದು ತಿಳಿಸಿದರು.

ಶಿಕ್ಷಣ ಸಂವರ್ಧನೆಗೆ ನೀಡಿದ ಕೊಡುಗೆಯನ್ನು ಅನುಲಕ್ಷಿಸಿ ಪ್ರೊ. ಶಿವಾನಂದ ಪಟ್ಟಣಶೆಟ್ಟರ ಇವರನ್ನು ಇದೇ ಸಂದರ್ಭದಲ್ಲಿ ಪರಿಷತ್ತಿನಿಂದ ಸನ್ಮಾನಿಸಲಾಯಿತು. ವೇದಿಕೆ ಮೇಲೆ ದತ್ತಿದಾನಿಗಳಾದ ಸುರೇಖಾ ಸದಾನಂದ ಪಿಳ್ಳಿ, ಬಸವರಾಜ ಪಿಳ್ಳಿಉಪಸ್ಥಿತರಿದ್ದರು. ಡಾ.ದತ್ತಪ್ರಸನ್ನ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಗೌರವ ಕಾರ್ಯದರ್ಶಿ ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಿ.ಎಸ್. ಬಾಪುರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಡಾ. ಅನಂತ ಶಿವಪುರ, ಸಿ.ಕೆ.ಎಚ್. ಶಾಸ್ತ್ರಿ(ಕಡಣಿ), ಡಾ. ಶಿವಪ್ಪ ಕುರಿ, ಜೆ.ಎ. ಪಾಟೀಲ, ಡಾ. ಧನೇಶ ದೇಸಾಯಿ, ಅ.ದ. ಕಟ್ಟೀಮನಿ, ಅಂದಾನೆಪ್ಪ ವಿಭೂತಿ, ಪ್ರ.ತೋ. ನಾರಾಯಣಪುರ, ಯಲ್ಲಪ್ಪ ಹಂದ್ರಾಳ, ಬಿ.ಎಸ್. ಹಿಂಡಿ, ಮಂಜುಳಾ ವೆಂಕಟೇಶಯ್ಯ, ಡಾ. ರಶ್ಮಿ ಅಂಗಡಿ, ಎಸ್.ಎಸ್. ಪಿಳ್ಳೆ, ಪಾರ್ವತಿ ಬೇವಿನಮರದ, ರತ್ನಾ ಪುರಂತರ, ಷಡಕ್ಷರಿ ಮೆಣಸಿನಕಾಯಿ, ಸತೀಶಕುಮಾರ ಚನ್ನಪ್ಪಗೌಡರ, ಅಮರೇಶ ರಾಂಪುರ, ಗುರುಪಾದ ಕಟ್ಟಿಮನಿ, ಬಸವರಾಜ ಗಣಪ್ಪನವರ, ಎಸ್.ಪಿ. ಹೊಂಬಳ, ಸಹನಾ ಪಿಳ್ಳಿ, ಭಾಗ್ಯಶ್ರೀ ಹುರಕಡ್ಲಿ, ಶಾಂತಾ ಗಣಪ್ಪನವರ, ಕಲಾವತಿ ಪಿಳ್ಳೆ, ಶೈಲಶ್ರೀ ಕಪ್ಪರದ, ಸುಪ್ರಿಯಾ ಅಂಗಡಿ, ಎಸ್. ಎಸ್. ಪಿಳ್ಳೆ, ಕೆ.ಎಸ್. ಗುಗ್ಗರಿ, ದಿಲೀಪಕುಮಾರ ಗುಗ್ಗರಿ, ಮಹಾಂತ ಕಟ್ಟಿಮನಿ, ಸುನಂದಾ ಪಿಳ್ಳಿ, ಉಮಾ ಕಣವಿ, ಅಕ್ಕಮ್ಮ ಪಾರ್ವತಿಮಠ, ಬಿ.ಬಿ. ಹೊಳಗುಂದಿ, ಅನಂತಮೋಹನ ಭಟ್, ಶಾರದಾ ಹಚಡದ, ವಿಜಯಲಕ್ಷ್ಮಿ ಕಾತರಕಿ, ಬಸವರಾಜ ತೋಟಗೇರ, ಶ್ರೀಧರ ದೇಶಪಾಂಡೆ, ಈಶ್ವರಪ್ಪ ಕುಬುಸದ, ಜಗನ್ನಾಥ ಟಿಕಾಂದಾರ, ಕೊಟ್ರೇಶ ಮೆಣಸಿನಕಾಯಿ, ಜಯಬಸವ ಮೆಣಸಿನಕಾಯಿ, ಶೋಭಾ ಬೆಂಗಳೂರ, ಗುರುದೇವಿ ಪಟ್ಟಣಶೆಟ್ಟಿ, ಸಾಕ್ಷಿ ಕುರ್ಲಿ, ಶಿವಕುಮಾರ ಬೇವಿನಮರದ, ಗಂಗಪ್ಪ ಮುದಗಲ್ಲ, ಮಧು ಕುರ್ಲಿ, ಕೆ.ಎಸ್. ಜಯದೇವ ಭಟ್, ಮೋಹನ ಕೋರಿ, ಎಸ್.ಪಿ. ಗೌಳಿ, ಎಸ್. ಎಸ್. ಯಾನಮಶೆಟ್ಟಿ, ಎಂ.ಎಫ್. ಡೋಣಿ, ಶಂಭು ಕಾತರಕಿ, ಜನೇಶ ಚನ್ನಪ್ಪಗೌಡರ ಮೊದಲಾದವರು ಉಪಸ್ಥಿತರಿದ್ದರು.

ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಪೂಜ್ಯರು ಸೂಕ್ಷ್ಮಮತಿಗಳಾಗಿದ್ದು, ಸಮಾಜಕ್ಕೆ ಒದಗಬಹುದಾದ ಆಪತ್ತುಗಳನ್ನು ಮುಂಚಿತವಾಗಿಯೇ ಗ್ರಹಿಸಿ ಅವುಗಳಿಗೆ ಈಗಿನಿಂದಲೇ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಿದ್ದರು. ಪ್ರತಿ ವ್ಯಕ್ತಿಯಲ್ಲಿರುವ ಉತ್ತಮ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದರು. ಬಂದ ಭಕ್ತರಿಗೆ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಿ ಓದುವ ಸಂಸ್ಕೃತಿಯನ್ನು ಬೆಳೆಸುವ ಮಹತ್ವದ ಕಾರ್ಯವನ್ನು ಮಾಡಿದರು. ಭಕ್ತರು ನೀಡಿದ ಹಣವನ್ನು ಪುಸ್ತಕ ಪ್ರಕಟನೆಗೆ ಬಳಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಕಾರ್ಯವನ್ನು ಮಾಡಿದರೆಂದು ತಿಳಿಸಿದರು.

### ರೋಟರಿ ಐ ಕೇರ್‌ನಲ್ಲಿ 200ನೇ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ

## 16 ಜನರಿಗೆ ಯಶಸ್ವಿ ನೇತ್ರ ಶಸ್ತ್ರ ಚಿಕಿತ್ಸೆ

■ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಕ್ಲಬ್ ಗದಗ-ಬೆಟಗೇರಿ ವೆಲ್‌ಫೇರ್ ಸೊಸೈಟಿ, ರೋಟರಿ ಕ್ಲಬ್ ಗದಗ-ಬೆಟಗೇರಿ ಇವುಗಳ ಸಂಯುಕ್ತಾಶ್ರಯದಲ್ಲಿ ಜರುಗಿದ 200ನೇ ನೇತ್ರ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ 16 ಜನರಿಗೆ ಯಶಸ್ವಿಯಾಗಿ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲಾಯಿತು. ಕಣ್ಣಿನಲ್ಲಿ ಮಸೂರ ಅಳವಡಿಸುವ ಈ ಶಸ್ತ್ರ ಚಿಕಿತ್ಸಾ ಶಿಬಿರದ ಪ್ರಾಯೋಜತ್ವವನ್ನು ನೀಲಮ್ಮ ಪ್ರಭಣ್ಣ ಹುಣಶಿಕಟ್ಟಿ ವಹಿಸಿದ್ದರು. ಸುಮಾರು 50 ಜನ ರೋಗಿಗಳನ್ನು ತಪಾಸಣೆ ಮಾಡಿ ಶಸ್ತ್ರ ಚಿಕಿತ್ಸೆ ಅವಶ್ಯವಿದ್ದ ಹಾಗೂ ಯೋಗ್ಯರಾದ 16 ಜನರಿಗೆ ನೇತ್ರ ಶಸ್ತ್ರ ಚಿಕಿತ್ಸೆಯುನ್ನು ಕೈಗೊಂಡರು.



ಶಸ್ತ್ರ ಚಿಕಿತ್ಸೆಯ ನಂತರ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಗದಗ-ಬೆಟಗೇರಿ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷ ಶ್ರೀಧರ ಸುಲ್ತಾನಪೂರ ವಹಿಸಿ ಸಂಸ್ಥೆಯ ಕಾರ್ಯಕ್ರಮ ಕುರಿತು ಮಾಹಿತಿ ನೀಡಿದರು. ರೊ. ಚನ್ನವೀರಪ್ಪ ಹುಣಶಿಕಟ್ಟಿ ಹಾಗೂ ಚಂದ್ರಶೇಖರ ಹುಣಶಿಕಟ್ಟಿ ಮಾತನಾಡಿ, ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ತಮ್ಮ ಶಕ್ತಿಗನುಸಾರವಾಗಿ ಸಹಾಯ ಮಾಡಬೇಕೆಂದು ವಿನಂತಿಸಿದರು.

ರೋಟರಿ ಸಂಸ್ಥೆಯ ಹಿರಿಯ ಸದಸ್ಯರಾದ ರೊ.ಸುರೇಶ ಕುಂಬಾರ ಇಲ್ಲ ರೋಗಿಗಳಿಗೆ ಬ್ರೆಡ್‌ಗಳನ್ನು ಹಂಚಿದರು. ನೇತ್ರ ಸಹಾಯಕರಾದ ರುದ್ರೇಶ ಶಸ್ತ್ರ ಚಿಕಿತ್ಸೆಗೆ ಒಳಗಾದ ರೋಗಿಗಳು ತಮ್ಮ ಕಣ್ಣಿನ ಆರೋಗ್ಯವನ್ನು ಯಾವ ರೀತಿ ಕಾಳಜಿವಹಿಸಬೇಕೆಂದು ತಿಳಿಸಿದರು. ಅಸಿಸ್ಟಂಟ್ ಗವರ್ನರ್ ಶಿವಾಚಾರ್ಯ ಎಸ್.ಹೊಸಳ್ಳಿಮಠ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ರೋಟರಿ ಸಂಸ್ಥೆಯ ಅಧ್ಯಕ್ಷ ರೊ. ಆರ್.ಬಿ. ಉಪ್ಪಿನ ಸ್ವಾಗತಿಸಿದರು. ರೋಟರಿ ಸಂಸ್ಥೆ ವೆಲ್ ಫೇರ್ ಸೊಸೈಟಿಯ ಕಾರ್ಯದರ್ಶಿ ರೊ. ಬಾಲಕೃಷ್ಣ ಕಾಮತ್ ವಂದಿಸಿದರು. ರೋಟರಿ ಸಂಸ್ಥೆಯ ಸದಸ್ಯರಾದ ರೊ. ಡಾ. ಪ್ರದೀಪ ಉಗಲಾಟ, ರೊ. ವೀಣಾ ತಿರ್ಲಾಪೂರ, ರೊ. ಡಾ. ಶೇಖರ ಡಿ.ಸಜ್ಜನರ, ರೊ. ಉಮೇಶ ಪುರದ, ರೊ. ಡಾ. ಕಮಲಾಕ್ಷಿ ಅಂಗಡಿ, ರೊ. ಅಕ್ಷಯ ವ್ಹಿ.ಶೆಟ್ಟಿ, ರೊ. ವಿಶ್ವನಾಥ ಯಳಮಲಿ, ರೊ. ಹೆಚ್.ಎಸ್. ಪಾಟೀಲ, ರೊ. ಡಾ. ವಿನಯ ಟಿಕಾರೆ, ಲಲಿತ ಹುಣಶಿಕಟ್ಟಿ ಮುಂತಾದವರು ಉಪಸ್ಥಿತರಿದ್ದರು. ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ರುದ್ರೇಶ, ನೇತ್ರಾ, ಮಲ್ಲಪ್ಪ ಕುಂಬಾರ, ಜ್ಯೋತಿ ದೊಡ್ಡಮನಿ, ಆನಂದ ಸಿಂಗ್ರಿ ಸಹಕರಿಸಿದರು.

## ಕರ್ಪೂರವಳ್ಳಿ ಚಂದ್ರಶೇಖರ ಶ್ರೀಗಳ ಅಗಲಿಕೆಗೆ ಶ್ರೀ ರಂಭಾಪುರಿ ಜಗದುರುಗಳ ಸಂತಾಪ



■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಕೆ.ಆರ್. ನಗರ ತಾಲೂಕಿನ ಕರ್ಪೂರವಳ್ಳಿ ಜಂಗಮ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ತಮ್ಮ 69ನೇ ವಯಸ್ಸಿನಲ್ಲಿ ಹಠಾತ್ತಾಗಿ ಹೃದಯಾಘಾತದಿಂದ ಶಿವೈಕ್ಯರಾಗಿರುವುದಕ್ಕೆ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿದರು.

ಶ್ರೀ ರಂಭಾಪುರಿ ಜಗದ್ಗುರುಗಳು ಸೋಮವಾರ ಕರ್ಪೂರವಳ್ಳಿ ಜಂಗಮ ಮಠಕ್ಕೆ ಭೇಟಿ ನೀಡಿ ಚಂದ್ರಶೇಖರ ಶ್ರೀಗಳ ಸಮಾಧಿ ಶ್ರದ್ಧಾಂಜಲಿ ಸಮಾರಂಭದ ಸಾನ್ನಿಧ್ಯ ವಹಿಸಿ ಶಾಂತಿ ಸಂದೇಶ ಅನುಗ್ರಹಿಸಿದರು.


ಶ್ರೀಗಳು ಧಾರ್ಮಿಕ ಶೈಕ್ಷಣಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯ ಮಾಡಿದ್ದಾರೆ. ಕರ್ಪೂರವಳ್ಳಿ ಜಂಗಮ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿದ್ದು, ಅವರ ಉತ್ತರಾಧಿಕಾರಿ ನೇಮಕದ ಬಗ್ಗೆ ತಮ್ಮೊಂದಿಗೆ ಇತ್ತೀಚೆಗೆ ಚರ್ಚಿಸಿ ದೃಢಪಡಿಸಿದ್ದರು. ಶ್ರೀಗಳು ಶ್ರೀ ರಂಭಾಪುರಿ ಪೀಠದ ಮೇಲೆ ಅಪಾರ ಅಭಿಮಾನ ಹೊಂದಿದವರಾಗಿದ್ದು, ಶ್ರೀ ಪೀಠದ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ವೀರಶೈವ-ಗುರು ಪೀಠ ಪರಂಪರೆಯಂತೆ ಅವರ ಕ್ರಿಯಾ ಸಮಾಧಿ ಹಾಗೂ ಉತ್ತರಾಧಿಕಾರಿ ನಿಯುಕ್ತಿ ಮಾಡಲಾಗುವುದೆಂದು ತಿಳಿಸಿದರು. ಚಂದ್ರಶೇಖರ ಶಿವಾಚಾರ್ಯರ ಅಗಲಿದ ಪವಿತ್ರ ಆತ್ಮಕ್ಕೆ ದಯಾಘನನಾದ ಪರಮಾತ್ಮನು ಚಿರ ಶಾಂತಿ ನೀಡಲಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಭಕ್ತ ವರ್ಗಕ್ಕೆ ನೀಡಲೆಂದು ಶ್ರೀ ರಂಭಾಪುರಿ ಜಗದ್ಗುರುಗಳು ತಿಳಿಸಿದರು.

### ಶ್ರೀ ಗುರುಬಸಪ್ಪಜ್ಜ ದಂಪತಿಗಳ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಫೆ.26ರಿಂದ

## ಶಿಗ್ಲಿಯ ತಪೋನಿಧಿ ಶ್ರೀಗುರುಬಸಪ್ಪನವರು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಈ ಭಾಗದ ಶಿಕ್ಷಣ ಕಾಶಿ ಎಂದೇ ಗುರುತಿಸಿಕೊಂಡಿರುವ ಶಿಗ್ಲಿ ಗ್ರಾಮ ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲೂ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿರುವ ಗ್ರಾಮವಾಗಿದೆ. ಶಿಗ್ಲಿ ಗ್ರಾಮದಲ್ಲಿ ಗುರುಬಸಪ್ಪಜ್ಜ ದಂಪತಿಗಳ ಇಲ್ಲಿ ಕೈಗೊಂಡ ಅನೇಕ ಧಾರ್ಮಿಕ ಕಾರ್ಯಗಳು ಇಂದಿಗೂ ಹಸಿರಾಗಿದ್ದು, ಶಿಗ್ಲಿ ಗ್ರಾಮಕ್ಕೆ ಮಹಾ ತಪೋನಿಧಿ ಮತ್ತು ಇಚ್ಛಾಮರಣ ಪಡೆದ ಶ್ರೀ ಗುರುಬಸಪ್ಪಜ್ಜನವರು ಮತ್ತು ಶಾಂತಿವೀರಮ್ಮನವರು ದಂಪತಿಗಳು ಇಲ್ಲಿ ಬಂದು ಬಹುಕಾಲ ನೆಲೆಸಿದರು. ಗುರುಬಸಪ್ಪಜ್ಜ ಬಾಲ್ಯದಿಂದಲೇ ಆಧ್ಯಾತ್ಮ ಮತ್ತು ತತ್ವ ಶಾಸ್ತ್ರಗಳಲ್ಲಿ ಒಲವು ಬೆಳೆಸಿಕೊಂಡು ಬೆಳೆದರು.



ಇವರು ಧರ್ಮಪತ್ನಿ ಶಾಂತಿವೀರಮ್ಮ ಗಂಡನ ಒಲವಿನಂತೆ ಗಂಡನ ನೆರಳಾಗಿ ಬಾಳಿದರು. 1895ರಲ್ಲಿ ದೂರದ ಶಿಗ್ಲಿಗೆ ಬಂದು ನೆಲೆಸಿದರು. ಇಲ್ಲಿ ಆಧ್ಯಾತ್ಮದ ವಾತಾವರಣ ಇವರನ್ನು ಚುಂಬಕದಂತೆ ಸೆಳೆದಿತ್ತು.

ದಂಪತಿಗಳಿಬ್ಬರು ಜನಾನುರಾಗಿ ಕಾಯಕ ನಿಷ್ಠರಾಗಿ ಜನರೊಂದಿಗೆ ದುಡಿದರು. ದಾನ ಮಾಡುವುದಕ್ಕಾಗಿ ಗಳಿಸುತ್ತಿದ್ದರು. ಜನಸೇವೆಯೇ ಜೀವನ ಗುರಿಯಾಗಿತ್ತು. ವೈದ್ಯಕೀಯ ಸೌಲಭ್ಯವಿಲ್ಲದ ಆಗಿನ ಕಾಲದಲ್ಲಿ ಗುರುಬಸಪ್ಪನವರು ನೀಡುತ್ತಿದ್ದ ಗಾವಟಿ ಔಷಧಿ ಜನರಿಗೆ ವರದಾನವಾಗಿತ್ತು.

ಫೆ.26ರಿಂದ ಗುರುಬಸಪ್ಪಜ್ಜನವರ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ನಡೆಯಲಿದ್ದು, ಅಂದು ರಾತ್ರಿ 8 ಗಂಟೆಯಿಂದ ಜಾಗರಣೆ, ಶಿವಕೀರ್ತನೆ ಹಾಗೂ ಭಜನಾ ಮಂಡಳಿಗಳಿಂದ ಕಾರ್ಯಕ್ರಮ ಜರುಗುವುದು. ಫೆ.28ರ ಅಮವಾಸ್ಯೆ ಮುಂಜಾನೆ 8 ಗಂಟೆಗೆ ಶ್ರೀ ಗುರುಬಸಪ್ಪಜ್ಜ ದಂಪತಿಗಳ ಗದ್ದುಗೆಗೆ ಪೂಜಾಭಿಷೇಕ, ನಂತರ ಗುರುಬಸಪ್ಪಜ್ಜ ಹಾಗೂ ಶಾಂತವೀರಮ್ಮನವರ ಮೂರ್ತಿಗಳ ಮೆರವಣಿಗೆಯು ಸಕಲ ವಾದ್ಯ ವೈಭವಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿ ಮಠಕ್ಕೆ ಬರುವುದು. ಮಾರ್ಚ್ 1ರ ಸಾಯಂಕಾಲ 4 ಗಂಟೆಗೆ ಪಲ್ಲಕ್ಕಿ ಉತ್ಸವ, ಕಡುಬಿನ ಕಾಳಗ ಹಾಗೂ ಮಹಾಪ್ರಸಾದ ಜರುಗಲಿದೆ.

1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶದಲ್ಲಿ ಭಾಗವಹಿಸಿ ಮಹಾತ್ಮ ಗಾಂಧಿ ಅವರಂಥ ರಾಷ್ಟ್ರ ನಾಯಕರನ್ನು ಕಂಡು ಮಾತನಾಡಿಸಿ ಬಂದರು. ಅಲ್ಲಿಂದ ಬರುವಾಗ ಗಾಂಧೀ ಟೋಪಿ ಧರಿಸಿದರು. ಅದು ಆಗ ರಾಷ್ಟ್ರೀಯತೆಯ ಸಂಕೇತವಾಗಿತ್ತು. ಹೀಗೆ ಶಿಗ್ಲಿ ಯುವಕರಲ್ಲಿ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಿದರು. 1931ನೇ ಜನವರಿ 30ರಂದು ಬನದ ಹುಣ್ಣಿಮೆಯ ದಿನ ಇಚ್ಛಾ ಮರಣ ಹೊಂದಿದರು. ಅವರ ಈ ನಿರ್ಧಾರ ತಿಳಿದ ಪತ್ನಿಯೂ ಇವರು ಮುಂದೆಯೇ ಅದೇ ದಿನ ಇಚ್ಛಾಮರಣ ಪಡೆದರು.

## ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಬಡವರ ಪಾಲಿಗೆ ಸಂಜೀವಿನಿ

■ವಿಜಯಸಾಕ್ಷಿ ಸುದ್ದಿ, ಗದಗ



ಕಾಂಗ್ರೆಸ್ ಪಕ್ಷ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಜನರಿಗೆ ಕೊಟ್ಟ ಮಾತಿನ ಪ್ರಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿ ನುಡಿದಂತೆ ನಡೆದುಕೊಂಡ ಸರಕಾರ ಇದಾಗಿದ್ದು ಪಂಚ ಗ್ಯಾರಂಟಿ ಯೋಜನೆಗಳು ಬಡವರ ಪಾಲಿಗೆ ಸಂಜೀವಿನಿ ಇದ್ದಂತೆ ಎಂದು ಗದಗ ತಾಲೂಕ ಪಂಚ ಗ್ಯಾರಂಟಿ ಸಮಿತಿ ಸದಸ್ಯರಾದ ಪ್ರೋ ಸಂಗಮೇಶ ಹಾದಿಮನಿ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಸರಕಾರ ನಡೆಯನ್ನು ಅಭಿನಂದಿಸಿದ್ದು. ಬಡವರ ಬದುಕಿಗೆ ಆಸರೆಯಾದ ಗ್ಯಾರಂಟಿ ಯೋಜನೆಗಳು ಅಸಹಾಯಕ ಕುಟುಂಬಗಳಿಗೆ ಸ್ವಾಭಿಮಾನ ಹಾಗೂ ಆತ್ಮ ಸ್ಥೈರ್ಯ ತುಂಬಿದೆ. ಸರಕಾರ ಬಡವರ ಪರ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಗಳನ್ನು ರೂಪಿಸಲಿ ಎಂದು ಸಂಗಮೇಶ ಹಾದಿಮನಿ ಹಾರೈಸಿದ್ದಾರೆ.

## ನಾಳೆ ಶ್ರೀ ರಾಜೇಶ್ವರಿ ಕಲಾ ಕುಟೀರದ ವಾರ್ಷಿಕೋತ್ಸವ-ಸಂಗೀತ ನೃತ್ಯೋಲ್ಲಾಸ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕನ್ನಡ ಮತ್ತು ಕಲಾಭಿವೃದ್ಧಿ ಸೇವಾ ಸಂಸ್ಥೆ (ರಿ)ಯ ಶ್ರೀ ರಾಜೇಶ್ವರಿ ಕಲಾ ಕುಟೀರದ 24ನೇ ವಾರ್ಷಿಕೋತ್ಸವ ಸಮಾರಂಭ, ಸಂಗೀತ ನೃತ್ಯೋಲ್ಲಾಸ-2025 ಮಹಾಶಿವರಾತ್ರಿ ವಿಶೇಷ ಕಾರ್ಯಕ್ರಮವು ಫೆ. 26 ರಂದು ಬುಧವಾರ ಸಂಜೆ 6 ಗಂಟೆಗೆ ನಗರದ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಜರುಗಲಿದೆ.

ಅಧ್ಯಕ್ಷತೆಯನ್ನು ಗದುಗಿನ ವಿಜಯ ಲಲಿತ ಕಲಾ ಸಂಸ್ಥೆಯ ಅಧ್ಯಕ್ಷ ಅಶೋಕ ಅಕ್ಕಿ ವಹಿಸುವರು. ಅತಿಥಿಗಳಾಗಿ ಹವ್ಯಾಸಿ ರಂಗ ಕಲಾವಿದ ಮೌನೇಶ ಬಡಿಗೇರ, ಸಾಹಿತಿ ನಿಂ.ಗು.ಸೊಲಗಿ, ಜನಪದ ಕಲಾವಿದ ಗವಿಸಿದ್ಧಯ್ಯ ಹಳ್ಳಿಕೇರಿಮಠ, ಉಪನ್ಯಾಸಕ ಡಾ.ದತ್ತಪ್ರಸನ್ನ ಪಾಟೀಲ, ಗಣ್ಯ ಉದ್ಯಮಿ ವಿಜಯಕುಮಾರ ಗಡ್ಡಿ ಆಗಮಿಸುವರು.

ಶ್ರೀಮತಿ ಪೂಜಾ ವೇರ್ಣೆಕರ ಹಾಗೂ ವಿದ್ಯಾರ್ಥಿಗಳಿಂದ ಸಂಗೀತ, ರಾಜೇಶ್ವರಿ ಕಲಾ ಕುಟೀರದ ವಿದ್ಯಾರ್ಥಿಗಳಿಂದ ನೃತ್ಯಗಳು ಜರುಗಲಿವೆ. ಸಂಸ್ಥಾಪಕ ಅಧ್ಯಕ್ಷ ಗಜಾನನ ವೇರ್ಣೆಕರ, ಸಂಚಾಲಕ ಅಂದಾನಪ್ಪ ವಿಭೂತಿ, ನೃತ್ಯ ನಿರ್ದೇಶಕಿ ಮಾಲಾ ತಂಬ್ರಳ್ಳಿ ಉಪಸ್ಥಿತರಿರುವರು.


## ಗ್ರಾಮ ಪಂಚಾಯತ, ಕಾರ್ಯಾಲಯ, ಯಲಿಶಿರೂರ

ತಾಲೂಕ : ಗದಗ ಜಿಲ್ಲಾ : ಗದಗ

ಸಂ.ಗ್ರಾ.ಪಂಹೆ/ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ/ದರಪಟ್ಟಿ/2024-25 ದಿನಾಂಕ : 24/02/2025

-ಃ ದರಪಟ್ಟಿ ಪ್ರಕಟಣೆ ಃ-

ಅಧ್ಯಕ್ಷರು/ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಯಲಿಶಿರೂರ ಇವರು 2024-25ನೇ ಸಾಲಿನ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅವಶ್ಯಕವಿರುವ ಐಟಂವಾರು ಸಾಮಗ್ರಿ ಮೊತ್ತಕ್ಕೆ ಸಾಮಗ್ರಿಗಳನ್ನು ಪೂರೈಸಲು ನೋಂದಾಯಿತ ಅರ್ಹ ವೆಂಡರ್/ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ದರಪಟ್ಟಿ ಸಲ್ಲಿಸುವವರು ಗ್ರಾಮ ಪಂಚಾಯತಿಯಿಂದ ಖುದ್ದಾಗಿ ಖಾಲಿ ಟೆಂಡರ್ ಫಾರ್ಮ್‌ಗಳನ್ನು ಪಡೆದು ಸಲ್ಲಿಸತಕ್ಕದ್ದು.

| ಕ್ರ.ಸಂ. | ಕಾಮಗಾರಿಗಳ ಹೆಸರು | ಟೆಂಡರ್ ಮೊತ್ತ | ಖಾಲಿ ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) | ಷರಾ |
|---|---|---|---|---|
| 01 | ಶಿರೋಳ ಗ್ರಾಮದ ಸ.ಪ್ರಾ.ಶಾಲೆಯ ಕಂಪೌಂಡ್ ನಿರ್ಮಾಣ | 321667 | 500 | ಖಾಲಿ ಟೆಂಡರ್ ಗ್ರಾಮ ಪಂಚಾಯತಿಯಿಂದ ಪಡೆದು ಸಲ್ಲಿಸುವುದು |
| 02 | ಶಿರೋಳ ಗ್ರಾಮದ ಬಶೆಟ್ಟಿ ಇವರ ಜಮೀನಿನಿಂದ ಮುಳಗುಂದ ರಸ್ತೆವರೆಗೆ ರಸ್ತೆ ನಿರ್ಮಾಣ | 123990 | 500 | |

ಅರ್ಹ ವೆಂಡರ್/ಏಜೆನ್ಸಿಗಳಿಂದ ಖಾಲಿ ದರಪಟ್ಟಿ ಫಾರಂಗಾಗಿ ಅರ್ಜಿ ಸ್ವೀಕರಿಸುವ ದಿನಾಂಕ: 25/02/2025 ರಿಂದ 05/03/2025 ರವರೆಗೆ

ಖಾಲಿ ದರಪಟ್ಟಿ ಫಾರಂ ನೀಡುವ ದಿನಾಂಕ: 05/03/2025 ಭರ್ತಿ ಮಾಡಿದ ದರಪಟ್ಟಿಗಳನ್ನು ಸ್ವೀಕರಿಸುವ ದಿನಾಂಕ: 05/03/2025 ಮುಂಜಾನೆ 10.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆವರೆಗೆ. ತೆರೆಯುವ ದಿನಾಂಕ ಹಾಗೂ ಸಮಯ: 06/03/2025 ರ ಮಧ್ಯಾಹ್ನ 4.00 ಗಂಟೆ ನಿಬಂಧನೆಗಳು

1) ಷರತ್ತು/ ನಿಬಂಧನೆಗಳಿಗೆ, ಹೆಚ್ಚಿನ ಮಾಹಿತಿಗಾಗಿ ಕೆಲಸದ ದಿನಗಳಲ್ಲಿ ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಗ್ರಾಮ ಪಂಚಾಯತ ಯಲಿಶಿರೂರಯಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ ಆಗಿದೆ/-
**ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು**
ಗ್ರಾಮ ಪಂಚಾಯತಿ ಯಲಿಶಿರೂರ

ಸಹಿ ಆಗಿದೆ/-
**ಅಧ್ಯಕ್ಷರು**
ಗ್ರಾಮ ಪಂಚಾಯತಿ ಯಲಿಶಿರೂರ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka